# ಯುಗರಶ್ಮಿ

★ ಮನುಷ್ಯವರ್ಗದ ರಕ್ಷಾಮಾರ್ಗ

★ ಸ್ನೇಹ ಮತ್ತು ಸೌಹಾರ್ದದ ಸಂದೇಶ

★ ಈಸಾನಬಿ (ಪ್ರವಾದಿಯೇಸು) ವಿವಾಹಿತರಲ್ಲವೇ?

★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ತ್ರೈಮಾಸಿಕ

ಮಾರ್ಚ್ 1983

ಬೆಲೆ: ರೂ. 1-00

ಓ ಮನುಷ್ಯರೇ, ನಿಮ್ಮನ್ನೂ ನಿಮಗೆ ಮುಂಚೆ ಇದ್ದವರನ್ನೂ ಸೃಷ್ಟಿಸಿದ ನಿಮ್ಮ ನಾಥನನ್ನು ಆರಾಧಿಸಿರಿ, ಎಲ್ಲಾ ದೋಷಗಳಿಂದ ನೀವು ತಡೆಯಲ್ಪಡಲಿಕ್ಕಾಗಿ.

—ಪವಿತ್ರ ಖುರ್‌ಆನ್ (2 : 22)

# ಯುಗರಶ್ಮಿ ತ್ರೈಮಾಸಿಕ

10–23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575 001.

ಬಿಡಿಪ್ರತಿ : ರೂ. 1–00

ವಾರ್ಷಿಕ ಚಂದಾ : ರೂ. 4–00

ಅಂಚೆ ಮೂಲಕ : ರೂ. 5–00


**ವಿಷಯ ಸೂಚಿಕೆ :**


| | ಪುಟ |
|---|---|
| * ನನ್ನ ಕೈಯಲ್ಲಿ ಖಡ್ಗವಿಲ್ಲ ... ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... | 2 |
| * ಮನುಷ್ಯ ವರ್ಗದ ರಕ್ಷಾ ಮಾರ್ಗ ... ... | 3 |
| * ಸ್ನೇಹ ಮತ್ತು ಸೌಹಾರ್ದದ ಸಂದೇಶ ... ... | 6 |
| * ಈಸಾನಬಿ (ಪ್ರವಾದಿ ಯೇಸು) ವಿವಾಹಿತರಲ್ಲವೇ ? ... ... | 12 |
| * ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-4 ... ... | 17 |
| * ಅಹ್ಮದಿಯಾ ವಾರ್ತೆಗಳು ... ... | 21 |



**Statement about Ownership and other particulars about the Newspaper YUGARASHMI Quarterly**

**FORM IV (See Rule 8)**

| | | |
|---|---|---|
| 1 | Place of publication | Mangalore |
| 2 | Periodicity of its publication | Quarterly |
| 3 | Printer's name | U. Ramesh Anchan |
| | Whether citizen of India ? | Yes |
| | Address | Karavali Printers, Azizuddin Road Bunder, Mangalore-575 001. |
| 4 | Publisher's name | Muhammad Yusuf |
| | Whether citizen of India ? | Yes |
| | Address | 10–23/1008, Ansari Road, Bunder, Mangalore-575 001. |
| 5 | Editor's name | Muhammad Yusuf |
| | Whether citizen of India? | Yes |
| | Address | 10-23/1008, Ansari Road, Bunder Mangalore-575 001. |
| 6 | Names and address of individuals who own the newspaper and partners or shareholders holding more than one percent of the capital | Jamath Ahmadiyya, 10-23/1008, Ansari Road, Bunder Mangalore-575 001. |

I, Muhammad Yusuf hereby declare that the particulars given above are true to the best of my knowledge aud belief

Dated · 1—3—1982 Sd./– **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| | | |
|---|---|---|
| ಸಂಪುಟ: 8 | ಮಾರ್ಚ್ 1983 / ಅಮಾನ್ 1362 | ಸಂಚಿಕೆ: 2–4 |

## ನನ್ನ ಕೈಯಲ್ಲಿ ಖಡ್ಗವಿಲ್ಲ

"ಇಸ್ಲಾಂ ಖಡ್ಗದಿಂದ ಪ್ರಚಾರಗೊಂಡಿದ್ದರೆ ಆ ಖಡ್ಗ ಯಾರ ಮೇಲೆ ಬೀಸಲಾಯಿತೋ ಅವರನ್ನು ಆಕರ್ಷಿಸಲಿಕ್ಕೆ ಇಸ್ಲಾಮಿಗೆ ಹೇಗೆ ಸಾಧ್ಯವಾಯಿತು? ಸತ್ಯಕ್ಕೋಸ್ಕರ ಸರ್ವಸ್ವವನ್ನೂ ಪರಿತ್ಯಜಿಸಿ ಸರ್ವ ಜನವಿಭಾಗದ ಸಂಘಟಿತ ವಿರೋಧಗಳ ಕರಾಳ ದಂಷ್ಟ್ರಗಳೆಡೆಯಲ್ಲಿ ಇಸ್ಲಾಮನ್ನು ಭದ್ರವಾಗಿ ಹಿಡಿದಿದ್ದ ಆ ವಿಶ್ವಾಸಿಗಳನ್ನು ಆಕರ್ಷಿಸಲು ಶಕ್ತವಾದ ಮತಕ್ಕೆ ಅದರ ಸತ್ಯತೆಯ ಕುರಿತು ಇತರರಿಗೆ ಮನಗಾಣಿಸಿಕೊಡಲು ಅಸಾಧ್ಯವಾಗಿತ್ತೆ? ಯಥಾರ್ಥ ಸಹಿಷ್ಣುತೆಯ ಕುರಿತು ಜಗತ್ತಿಗೆ ಮೊತ್ತಮೊದಲು ಕಲಿಸಿದ ಒಂದು ಮತದ ವಿರುದ್ಧ ಕ್ರೂರವಾದೊಂದು ಆರೋಪವಾಗಿದೆ ಇದು. ಒಟ್ಟಾರೆ, ದೇವನು ವಾಗ್ದತ್ತ ಮಸೀಹನ್ನು ಖಡ್ಗ ರಹಿತವಾಗಿ ಕಳುಹಿಸಿದ್ದಾನೆ—ಇಸ್ಲಾಮಿಗೆ ಅದರ ಸೌಂದರ್ಯ ಮತ್ತು ಸೊಬಗಿನಿಂದ ಲೋಕವನ್ನು ಜಯಿಸಲು ಸಾಧ್ಯವಿದೆಯೆಂದು ರುಜುಗೊಳಿಸಲಿಕ್ಕಾಗಿ. ಆ ವಾಗ್ದತ್ತ ಮಸೀಹರ ವಾದದ ಸತ್ಯತೆಯನ್ನು ಲೋಕ ಅಂಗೀಕರಿಸುವ ಕಾಲ ವಿದೂರವಲ್ಲ" (ಜಿಹಾದ್).

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ಜ್ಞಾನ ಸಂಪಾದನೆ ಮತ್ತು ಸಂಶೋಧನೆ

1. ಜ್ಞಾನ ಸಂಪಾದನೆಯಲ್ಲಿ ನಿರತನಾಗಿರುವಾಗ ಮೃತ್ಯುವನ್ನಪ್ಪುವವನು ಹುತಾತ್ಮನು.

2. ಅಜ್ಞರ ಮಧ್ಯೆ ವಿದ್ಯೆಗಳಿಸಿದವನು ಮಡಿದವರ ಮಧ್ಯೆ ಬದುಕಿದ್ದವನಂತೆ.

3. ಬಾಲ್ಯ ಕಾಲದಲ್ಲಿ ಗಳಿಸಿದ ಜ್ಞಾನ ಕಲ್ಲಿನಲ್ಲಿ ಕೆತ್ತಿದಂತೆ; ವೃದ್ಧಾಪ್ಯದಲ್ಲಿ ಗಳಿಸಿದ ಜ್ಞಾನ ನೀರಿನಲ್ಲಿ ಬರೆದಂತೆ.

4. ಬರಹ ಮೂಲಕ ಜ್ಞಾನವನ್ನು ಉಳಿಸಿರಿ.

5. ನೀವು ಮರೆತು ಬಿಡಲು ಸಾಧ್ಯತೆ ಇರುವುದನ್ನು ಬರೆದಿಡಲಿಕ್ಕೆ ಬಲಗೈಯ ಸಹಾಯ ಪಡೆಯಿರಿ.

6. ಮುಸ್ಲಿಮರ ಕಳೆದು ಹೋದ ಸ್ವತ್ತನ್ನು ಪತ್ತೆ ಹಚ್ಚಿರಿ—ಎಂದರೆ ವಿದ್ಯಾಸಂಪತ್ತು.

7. ಅತ್ಯಾಶೆ ಪಂಡಿತನ ಮನಸ್ಸಿನಿಂದ ಜ್ಞಾನವನ್ನು ನೀಗಿಸಿಬಿಡುತ್ತದೆ.

8. ಬುದ್ಧಿಶಕ್ತಿ ಅನುಗ್ರಹಿಸಲ್ಪಟ್ಟವನು ಅಭಿವೃದ್ಧಿ ಪಡೆಯುತ್ತಾನೆ.

9. ವಿದ್ಯೆಯನ್ನು ಕಂಡುಹಿಡಿಯಲಿಕ್ಕೆ ನೀವು ಅದನ್ನು ಹುಡುಕಿ ಹೋಗಬೇಕು.

10. ಗೋಪ್ಯವಾಗಿಟ್ಟ ಜ್ಞಾನ ನಷ್ಟ ಹೊಂದಿದಂತೆ.

11. ಲಜ್ಜಾವಂತನೂ ದುರಂಹಕಾರಿಯೂ ಜ್ಞಾನ ಸಂಪಾದನೆಯಲ್ಲಿ ಪರಾಜಿತನಾಗುತ್ತಾನೆ.

12. ಅತ್ಯಂತ ದೊಡ್ಡ ಪಂಡಿತ ಯಾರೆಂದು ಒಬ್ಬ ಪಂಡಿತನೊಡನೆ ಕೇಳಿದರೆ, ಎಲ್ಲ ಬಲ್ಲವನು ದೇವನೆಂದು ಅವನು ಹೇಳುವನು.

13. ಸದ್ಧರ್ಮಿಗಳ ಮಧ್ಯೆ ಇರುವ ವಿದ್ವಾಂಸ ನಕ್ಷತ್ರಗಳ ನಡುವೆ ಇರುವ ಚಂದ್ರನಂತೆ.

14. ಸಂಕ್ಷಿಪ್ತವಾಗಿ ಹೇಳುವುದು ಉತ್ತಮ.

**(ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಬರೆದ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು)**


**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission
10-23/1008, Ansari Road, Bunder, Mangalore-575 001.

# ಮನುಷ್ಯವರ್ಗದ ರಕ್ಷಾಮಾರ್ಗ

★ ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್
(ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ)

ದ್ವಿತೀಯ ಲೋಕ ಮಹಾಯುದ್ಧದ ಕಾಲದಲ್ಲಿ ಹಾಗೂ ಅದರ ನಂತರ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದಲ್ಲಿ ಉಂಟಾದ ತ್ವರಿತ ಪ್ರಗತಿ ಒಂದು ಹೊಸ ಕಾಲ ಘಟ್ಟಕ್ಕೆ ನಮ್ಮನ್ನು ಕೊಂಡೊಯ್ದಿದೆ. ಮನುಷ್ಯರಾಶಿ ಒಂದು ಹೊಸ ಯುಗದ ಪ್ರವೇಶ ದ್ವಾರದಲ್ಲಿ ಅಡಿಯಿಟ್ಟಿದೆ. ಮನುಷ್ಯನ ಅಧೀನದಲ್ಲಿರುವ ಹಾಗೂ ದಿನಂಪ್ರತಿ ವರ್ಧಿಸುತ್ತಿರುವ ಶಕ್ತಿಗಳು ಮನುಷ್ಯನ ಕ್ಷೇಮಾಭಿವೃದ್ಧಿಗಳ ಸಂಬಂಧಿಸಿ ಅತಿ ಹೆಚ್ಚಿನ ಪ್ರಗತಿಯ ವಾಗ್ದಾನಗಳನ್ನು ನೀಡುತ್ತಿವೆ. ಆದರೆ ಅವು ಮನುಷ್ಯ ಮನಸ್ಸುಗಳಲ್ಲಿ ಭೀತಿ ಮತ್ತು ಆಶಂಕೆಗಳನ್ನು ಸಹ ಹುಟ್ಟಿಸುತ್ತವೆ. ಈ ಶಕ್ತಿಗಳು ಪ್ರಯೋಗಸಾಧ್ಯಮಾಡಿದ ಮಾರಕಾಯುಧಗಳು ಮಾನವ ಸಂಸ್ಕೃತಿಯನ್ನೂ ನಾಗರಿಕತೆಯನ್ನೂ ನಾಶಪಡಿಸಲಿಕ್ಕೂ ಮನುಷ್ಯ ಜೀವಿತವನ್ನೇ ನಿರ್ನಾಮ ಮಾಡಲಿಕ್ಕೂ ಶಕ್ತವಾಗಿವೆ. ಮಹಾಶಕ್ತಿಗಳ ಅನ್ಯೋನ್ಯ ಪೈಪೋಟಿ ಆ ಭಯಾನಕವಾದ ಸಂಭಾವ್ಯ ಘಟನೆಯನ್ನು ನಿರಂತರ ನೆನಪು ಹುಟ್ಟಿಸುತ್ತದೆ.

ರಾಜತಾಂತ್ರಿಕರೂ ವಿಜ್ಞಾನಿಗಳೂ ಈ ಮಾರಕಾಯುಧಗಳ ಮತ್ತು ಇನ್ನು ಮುಂದೆ ಕಂಡು ಹಿಡಿಯಲ್ಪಡುವ ಅಧಿಕ ಶಕ್ತಿಯುತವಾದ ಇತರ ಆಯುಧಗಳ ಉಪಯೋಗದ ಕುರಿತಾದ ಬೆದರಿಕೆಗೆ ಎದುರಾಗಿ ಸಮಾಧಾನ ಮತ್ತು ಲೋಕ ಸಂರಕ್ಷಣೆಯ ಮಾರ್ಗಗಳನ್ನು ಉತ್ಕಂಠದಿಂದ ಹುಡುಕುತ್ತಿದ್ದಾರೆ. ಈ ಪರಿಶ್ರಮಗಳು ಯಶಸ್ವಿಯಾಗಲೆಂದೂ ಮಾರಕಾಯುಧಗಳ ಪ್ರಯೋಗಕ್ಕೆ ತಡೆಯುಂಟಾಲೆಂದೂ ಆಶಿಸೋಣ; ಹಾಗೆಯೇ ಪ್ರಾರ್ಥಿಸೋಣ. ಆದರೆ, ಪರಿಪೂರ್ಣವೂ ಫಲಪ್ರದವೂ ಆದ ಒಂದು ರಕ್ಷಾಮಾರ್ಗದ ಆವಿಷ್ಕರಣ ಮತ್ತು ಅಂಗೀಕರಣ ಇಷ್ಟರ ತನಕ ಪರೀಕ್ಷಿಸಲ್ಪಟ್ಟಿಲ್ಲವೆಂಬ ಸತ್ಯಾಂಶವನ್ನು ಒಪ್ಪಲೇ ಬೇಕು.

ರಾಷ್ಟ್ರೀಯ ಮತ್ತು ವೈಜ್ಞಾನಿಕ ಮಟ್ಟದಲ್ಲಿ ನಡೆಸಲಾಗುವ ಪರಿಶ್ರಮಗಳು ಒಂದು ಮೂಲಭೂತ ಸತ್ಯವನ್ನು ಸಂಪೂರ್ಣ ನಿರ್ಲಕ್ಷಿಸುತ್ತಿದೆ. ಎಲ್ಲಾ ಪ್ರಗತಿ ಮತ್ತು ಸಾಧನೆ ಸ್ವಪ್ರಯತ್ನ ಮತ್ತು ಬುದ್ಧಿ ಸಾಮರ್ಥ್ಯದ ಫಲ ಮಾತ್ರವೆಂದು ಮನುಷ್ಯನು ಅಹಂಕರಿಸುತ್ತಾನೆ. ಆದರೆ ಇದು ಮಹಾ ತಪ್ಪು ತಿಳುವಳಿಕೆಯಾಗಿದೆ. ಇಂತಹ ತಪ್ಪಾದ ತಿಳುವಳಿಕೆ ಗತಕಾಲಗಳಲ್ಲಿ ಪ್ರಬಲ ಜನತೆಗಳನ್ನು ಸಂಪೂರ್ಣ ನಾಶದೆಡೆಗೆ ದೂಡಿಬಿಟ್ಟಿದೆ. ಒಟ್ಟಿನಲ್ಲಿ, ಅಂತಹ ಒಂದು ಪ್ರಮಾದ ಪುನರಾವರ್ತಿಸಿ ಅಂತಹದೇ ದುರ್ವಿಧಿಗೆ ಗುರಿಯಾಗದಂತೆ ನಾವು ಜಾಗರೂಕತೆವಹಿಸಬೇಕಾಗಿದೆ.

ದೇವನು ಎಲ್ಲಾ ಅರಿವು ಮತ್ತು ಶಕ್ತಿಗಳ ಉಗಮವೆಂಬುದು ಪರಮ ಸತ್ಯ. ಅವನ ಜ್ಞಾನ ಸರ್ವವ್ಯಾಪಕವಾಗಿದೆ. ಅವನ ಶಕ್ತಿ ಸಕಲ ವಸ್ತುಗಳಲ್ಲೂ ವರ್ತಿಸುತ್ತಿದೆ. "ದೇವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನೂ ಮನುಷ್ಯನಿಗೆ ಪ್ರಾಪ್ತವಾಗದು. ಆಕಾಶದಲ್ಲೂ ಭೂಮಿಯಲ್ಲೂ ಅವನ ಅಧಿಕಾರ ವ್ಯಾಪಿಸಿದೆ. ಅಂದರೆ, ಭೌತಿಕ ವಸ್ತುಗಳ ಮೇಲೆಯೂ ಆಧ್ಯಾತ್ಮಿಕ ಕಾರ್ಯಗಳಲ್ಲೂ" ಎಂದು ಖುರ್‌ಆನ್ ಘೋಷಿಸುತ್ತದೆ. ಮತ್ತೂ ಖುರ್‌ಆನ್ ಹೀಗೆ ಹೇಳುತ್ತದೆ: "ಎಲ್ಲಾ ವಸ್ತುಗಳ ಅಪರಿಮಿತ ಭಂಡಾರವಿರುವುದು ದೇವನ ಬಳಿಯಲ್ಲಿ. ಅವನು ಇಚ್ಛಿಸಿದಂತೆ ಅವನ್ನು ಬಹಿರಂಗಪಡಿಸುತ್ತಲೂ ಅನುಗ್ರಹಿಸುತ್ತಲೂ ಇರುವನು".

ಈ ಜ್ಞಾನದಿಂದ ಒಂದಂಶವನ್ನು ಕರಗತ ಮಾಡಿ, ಈ ವಿಷಯದಲ್ಲಿ ತಾನು ತಿಳಿಯಬೇಕಾದುದೆಲ್ಲವನ್ನೂ ತಿಳಿದಾಯಿತೆಂದು ಮನುಷ್ಯನು ಭಾವಿಸುತ್ತಾನೆ. ಆದರೆ ಗತಕಾಲಗಳಲ್ಲಿ ಎಷ್ಟೋ ಸಲ ಇದು ಪ್ರಮಾದವೆಂದು ವ್ಯಕ್ತಗೊಂಡಿದೆ. ದೈವಿಕ ಜ್ಞಾನದ ಸೀಮಾತೀತ ಮಹಾ ಸಮುದ್ರದಿಂದ ಒಂದೇ ಒಂದು ಹನಿ ಮಾತ್ರವೇ ಮನುಷ್ಯ

ನಿಗೆ ಲಭಿಸಿದ ಒಟ್ಟು ಜ್ಞಾನವೆಂದು ಎಷ್ಟೋ ಬಾರಿ ಅವನಿಗೆ ತಿಳಿಯುವರೆ ಸಾಧ್ಯವಾಯಿತು. ಆದ್ದರಿಂದಲೇ, ಜ್ಞಾನದ ವೃದ್ಧಿಯುಂಟಾಗುವರೆ ನಿರಂತರ ಪ್ರಾರ್ಥಿಸುತ್ತಿರಬೇಕೆಂದು ನಮ್ಮೊಡನೆ ಆಜ್ಞಾಪಿಸಲಾಗಿದೆ.

ಆದರೆ, ಪ್ರಶ್ನೆ ಇನ್ನೂ ಅಲ್ಲೇ ಬಾಕಿಯುಳಿದಿದೆ. ತಿಳುವಳಿಕೆಯ ಪರಮವಾದ ಪ್ರಭವ ಕೇಂದ್ರ ಏನೇ ಆಗಿರಲಿ; ಅದರ ದುರ್ವಿನಿಯೋಗದಿಂದ ಮನುಷ್ಯನು ಸ್ವಯಂ ಹೇಗೆ ಸಂರಕ್ಷಿಸಲ್ಪಡುವನು? ವಿಚ್ಛೇದನದಿಂದಲೋ ಸಂಶ್ಲೇಷಣದಿಂದಲೋ ಉತ್ಪಾದಿಸಲ್ಪಡುವ ಅಣುಶಕ್ತಿ ದಿವ್ಯವಾದ ಒಂದು ಅನುಗ್ರಹವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದು ಮನುಷ್ಯನ ಕ್ಷೇಮಕ್ಕಾಗಿ ಮಾತ್ರ ಉಪಯೋಗಿಸಲ್ಪಡುವುದೆಂದೂ ಅವನ ವಿನಾಶಕ್ಕಾಗಿ ದುರುಪಯೋಗಿಸಲ್ಪಡಲಾರದೆಂದೂ ಏನು ಭರವಸೆ ಇದೆ? ಎಲ್ಲಾ ಜ್ಞಾನವೂ ದೇವನಿಂದ ಎಂದು ನಾವು ಯಥಾರ್ಥದಲ್ಲಿ ನಂಬುವುದಾದರೆ—ಅದರಲ್ಲಿ ಲೇಶವಾದರೂ ಸಂಶಯವಿಲ್ಲ—ವಿಜ್ಞಾನ ಶಾಖೆಯಲ್ಲುಂಟಾಗುವ ಏನಾದರೂ ಪ್ರಗತಿ ಅಥವಾ ಅಭಿವೃದ್ಧಿ, ಅವುಗಳ ದುರುಪಯೋಗ ಕಾರಣದಿಂದ ಮಾನವರಾಶಿಯ ಅಭಿವೃದ್ಧಿಗೂ ರಕ್ಷಣೆಗೂ ಒಂದು ಬೆದರಿಕೆಯಾಗಿ ಪರಿಣಮಿಸುವಾಗ ಅಂತಹ ವಿಪತ್ತುಗಳಿಂದ ಜೀವಜಾಲಗಳನ್ನು ಕಾಪಾಡಲು ದೇವನು ಮಾರ್ಗಗಳನ್ನು ತೋರಿಸಿಕೊಡುವನೆಂದು ನಂಬಲಿಕ್ಕೂ ನಾವು ನಿರ್ಬಂಧಿತರಾಗುತ್ತೇವೆ. ದೇವನು ನಾಶಪಡಿಸುತ್ತಾನೆಂಬುದೂ ಶಿಕ್ಷಿಸುತ್ತಾನೆಂಬುದೂ ನಿಜ. ಆದರೆ ತನ್ನ ಕರುಣೆ ಸಕಲ ವಸ್ತುಗಳನ್ನೂ ಆಶ್ಲೇಷಿಸಿದೆಯೆಂದೂ ಅವನು ಸಾರಿದ್ದಾನೆ.

ನಮ್ಮನ್ನು ಭಯವಿಹ್ವಲರನ್ನಾಗಿ ಮಾಡುವ ಈ ಮಹಾ ಕೇಡುಕುಗಳಿಂದಲೂ ವಿಪತ್ತುಗಳಿಂದಲೂ ಕಾಪಾಡಲ್ಪಡುವ ಯಥಾರ್ಥ ರಕ್ಷಾಮಾರ್ಗವೇನೆಂದರೆ, ಎಲ್ಲಾ ಜ್ಞಾನ ಮತ್ತು ಅನುಗ್ರಹಗಳ ಉಗಮವಾದ ಆ ಸತ್ಯದೇವನ ಹಿತಕ್ಕನುಸಾರವಾಗಿ ನಾವು ನಮ್ಮನ್ನು ಸಜ್ಜುಗೊಳಿಸಬೇಕಾಗಿದೆ. ಹಾಗೆ, ಈ ಕಾಲಘಟ್ಟದಲ್ಲಿ, ನಮ್ಮಲ್ಲಿರಬೇಕೆಂದು ದೇವ ನಿಚ್ಛಿಸುವ ಧಾರ್ಮಿಕವೂ ಆಧ್ಯಾತ್ಮಿಕವೂ ಆದ ಆ ಪ್ರಕಾಶದಲ್ಲಿ ನಾವು ನಡೆಸಲ್ಪಡಲಿಕ್ಕಾಗಿ, ಆ ಮಾರ್ಗದರ್ಶನ ನಮಗೆ ಲಭಿಸಲಿಕ್ಕಾಗಿ ಆತ್ಮಾರ್ಥತೆಯಿಂದಲೂ ಸ್ಥಿರೋತ್ಸಾಹದಿಂದಲೂ ಪರಿಶ್ರಮಿಸುತ್ತಲೂ ಪ್ರಾರ್ಥಿಸುತ್ತಲೂ ಇರಬೇಕು. ಹಾಗೆ, ದೇವನು ನಮಗೆ ಬಹಿರಂಗಪಡಿಸಿದ ವರ್ಧಮಾನ ಜ್ಞಾನಗಳೂ ನಮಗೆ ಅವನು ಪ್ರದಾನ ಮಾಡಿರುವ ಶಕ್ತಿಗಳೂ ಮನುಷ್ಯ ವರ್ಗದ ಕ್ಷೇಮಾಭಿವೃದ್ಧಿಗಳಿಗಾಗಿ ವಿನಿಯೋಗಿಸಲಿಕ್ಕೂ ಈ ಶಕ್ತಿಗಳನ್ನು ದುರುಪಯೋಗ ಪಡಿಸುವ ಯಾವುದೇ ಪ್ರಯತ್ನದಿಂದಲೂ ಮನುಷ್ಯ ವಂಶವನ್ನು ರಕ್ಷಿಸಲಿಕ್ಕೂ ಸಿದ್ಧರಾಗಿರುವ ಸ್ಥಿತಿಯಲ್ಲಿ ನಾವು ಗುಣವಂತರಾಗಿ ಮಾರ್ಪಡಬೇಕಾಗಿದೆ.

ದೇವನು ತನ್ನ ದಾಸರ ಹೃತ್ಪೂರ್ವಕ ಪ್ರಾರ್ಥನೆಗಳನ್ನೂ ಅಭಯಯಾಚನೆಗಳನ್ನು ಕೇಳುತ್ತಲೂ ಅವುಗಳಿಗೆ ಉತ್ತರ ನೀಡುತ್ತಲೂ ಇರುವನೆಂಬ ಸತ್ಯವನ್ನು ನಾವು ನಂಬುತ್ತೇವೆ. ಖುರ್‌ಆನ್ ಹೇಳುತ್ತದೆ: "ದೇವನು ಹೇಳಿದನು—ನನ್ನನ್ನು ಕರೆಯಿರಿ; ನಾನು ಉತ್ತರ ನೀಡುವೆನು. ಅಹಂಕಾರ ಕಾರಣದಿಂದ ನನ್ನ ಪ್ರಾರ್ಥನೆ ಮಾಡದವನು ಹೇಯವಾದ ನರಕ ಶಿಕ್ಷೆಗೆ ಗುರಿಯಾಗುವನು" (40:61). ಆ ಭಯಾನಕವಾದ ಭವಿಷ್ಯವನ್ನಲ್ಲವೇ ನಾವಿಂದು ಅಭಿಮುಖೀಕರಿಸಿರುವುದು? ಇದಕ್ಕಿಂತ ವಿಶಾಲವಾದ ಯಾವ ವ್ಯಾಖ್ಯಾನವೂ ಇಲ್ಲಿ ಅಗತ್ಯವಿಲ್ಲ.

ಕಷ್ಟಪಡುವ ಮನುಷ್ಯವಂಶದ ವಿಲಾಪಗಳನ್ನು ಕೇಳಲಿಕ್ಕೂ ಮನುಷ್ಯರನ್ನು ಬಾಧಿಸಿರುವ ದುಸ್ಥಿತಿಗಳನ್ನು ದೂರೀಕರಿಸಲಿಕ್ಕೂ ದೇವನಿಗೆ ಮಾತ್ರವೇ ಶಕ್ತಿಯಿದೆ. "ಕ್ಲಿಷ್ಟಿತನಿಗೆ, ಅವನು ಸಹಾಯಕ್ಕಾಗಿ ಕರೆಯುವಾಗ ಉತ್ತರ ನೀಡಿ ಕಷ್ಟವನ್ನು ನಿವಾರಿಸಲಿಕ್ಕೂ ನಿಮ್ಮನ್ನು ಭೂಮಿಯಲ್ಲಿ ಹಕ್ಕುದಾರನನ್ನಾಗಿ ಮಾಡಲಿಕ್ಕೂ ಅಲ್ಲಾಹನಲ್ಲದೆ ಮತ್ಯಾರಿದ್ದಾರೆ?" ಎಂದು ದೇವನು ಕೇಳುತ್ತಾನೆ. ಮನುಷ್ಯವಂಶ ಇಂದು ಭಯಾನಕವಾದ ಒಂದು ಆಪತ್ತಿನಲ್ಲಿ ಸಿಲುಕಿದೆ. ಈ ದುಸ್ಥಿತಿಯಿಂದ ರಕ್ಷೆಹೊಂದಲು ಕೇಡುಕು ತಡೆಯಲ್ಪಡಲಿಕ್ಕೂ, ತದ್ವಾರಾ ಸಮಾಧಾನದಲ್ಲೂ ಸಂರಕ್ಷಣೆಯಲ್ಲೂ ತಮಗೆ ಸಂಪ್ರಾಪ್ತವಾದ ಅನುಗ್ರಹಗಳನ್ನು ಅನುಭವಿಸಿ ಆನಂದಿಸಲಿಕ್ಕೂ, ಹಾಗೆ ಭೂಮಿ ಮತ್ತು ಅದರ ಸಮೃದ್ಧಿಯ ಯಥಾರ್ಥ ಹಕ್ಕುದಾರರಾಗಲಿಕ್ಕೂ ಮನುಷ್ಯರು ಆಶೆಪಡುತ್ತಾರೆ. ಹಾಗಾದರೆ, ಇವನ್ನೆಲ್ಲಾ ಪ್ರದಾನ ಮಾಡಲು ಶಕ್ತಿಯಾರಿಗಿದೆಯೋ, ಆ ಸತ್ಯದೇವನ ಕಡೆಗೆ ಅವರು ತಿರುಗಬೇಕಾಗಿದೆ. ದೇವನ ಅನುಗ್ರಹ ಮತ್ತು ಕಾರುಣ್ಯಪ್ರಕರ್ಷದ ಕವಾಟಗಳು ತಮಗಾಗಿ ತೆರೆಯಲ್ಪಡಲಿಕ್ಕಾಗಿ ಅವರು ಅವನೊಡನೆ ಹೃತ್ಪೂರ್ವಕವಾಗಿ ಯಾಚಿಸಲಿ.

ಮನುಷ್ಯನ ಇಂದಿನ ದಯನೀಯ ಅವಸ್ಥೆಗೆ ಅತ್ಯಂತ ಸೂಕ್ತವಾದ ಒಂದು ಪ್ರಾರ್ಥನೆಯನ್ನು ಮುಹಮ್ಮದ್ ಪೈಗಂಬರರು ಹೀಗೆ ಕಲಿಸಿಕೊಟ್ಟಿರುವರು: "ಓ ನಾಥಾ, ನಾನು ನನ್ನ ಆತ್ಮವನ್ನು ನಿನ್ನ ರಕ್ಷೆಯಲ್ಲಿ ಅರ್ಪಿಸುತ್ತೇನೆ. ನನ್ನ ಹಿತವನ್ನೂ ನನ್ನ ಇಚ್ಛೆಗಳನ್ನೂ ನನ್ನ ಪರಿಶ್ರಮ ಗಳನ್ನೂ ನಿನ್ನ ಹಿತದ ಮುಂದೆ ಇಕೋ ಸಮರ್ಪಿಸುತ್ತೇನೆ. ನನ್ನ ಕಾರ್ಯಗಳನ್ನೆಲ್ಲಾ ನಾನು ನಿನಗೆ ಒಪ್ಪಿಸುತ್ತೇನೆ. ನನ್ನ ಅಂತ್ಯವನ್ನು ನಿನ್ನಲ್ಲಿ ಅರ್ಪಿಸುತ್ತೇನೆ; ನೀನು ಎಲ್ಲಾ ದೋಷಗಳಿಂದ ನನ್ನನ್ನು ರಕ್ಷಿಸುವೆಯೆಂಬ ವಿಶ್ವಾಸದಿಂದ· ನಿನ್ನ ಶಿಕ್ಷೆಗಳೂ ಕೋಪವೂ ನಿನ್ನ ಕರುಣೆ ಮತ್ತು ದಯಾ ವಲಯಕ್ಕೆ ನನ್ನನ್ನು ಪ್ರವೇಶಿಸುವಂತೆ ಮಾಡುತ್ತದೆ. ಓ ನಾಥಾ, ನಿನ್ನದಲ್ಲದೆ ಬೇರಾವ ರಕ್ಷಾ ಮಾರ್ಗವಿಲ್ಲ; ನಿನ್ನ ದಲ್ಲದೆ ಬೇರೊಂದು ರಕ್ಷಾ ಸ್ಥಾನವೂ ಇಲ್ಲ."

ವರ್ಧಿಸುತ್ತಿರುವ ಮಾರಕಾಯುಧಗಳ ಭಯಾನಕ ವಾದ ಸಂಹಾರ ಶಕ್ತಿ ಮನುಷ್ಯನನ್ನು ಒಂದು ವಾಸ್ತವತೆಯ ಮುಂದೆ ನಿಲ್ಲಿಸಿದೆ. ದೇವನು ಪ್ರದಾನಮಾಡುವ ಒಂದು ರಕ್ಷಾ ಮಾರ್ಗವಲ್ಲದೆ ಬೇರೊಂದು ಮಾರ್ಗವಿಲ್ಲವೆಂದೂ ದೇವನು ಸಿದ್ಧಪಡಿಸಿರುವ ಒಂದು ರಕ್ಷಾ ಸ್ಥಾನವಲ್ಲದೆ ಬೇರೊಂದು ರಕ್ಷಾ ಸ್ಥಾನವಿಲ್ಲವೆಂದೂ ಆಗಿದೆ ವಸ್ತು ಸ್ಥಿತಿ.

ದೇವನು ಸರ್ವಶಕ್ತನೆಂದೂ ಎಲ್ಲಾ ವಸ್ತುಗಳ ಮೇಲೆ ಅವನಿಗೆ ಅಧಿಕಾರವೂ ಶಕ್ತಿಯೂ ಉಂಟೆಂದೂ ನಾವು ಅಂಗೀಕರಿಸುತ್ತಲೂ ನಂಬುತ್ತಲೂ ಇದ್ದೇವೆ. ಎಲ್ಲಾ ಭೂಭಾಗಗಳಲ್ಲಿರುವ ಅವನ ಸೃಷ್ಟಿಗಳು, ಪುರು ಷರೂ ಸ್ತ್ರೀಯರೂ ಆಬಾಲವೃದ್ಧರೂ ಎಲ್ಲರೂ ವಿನೀತ ವಾಗಿಯೂ ಹೃದಯಸಾಕಲ್ಯದಿಂದಲೂ ಪೂರ್ಣ ವಿಶ್ವಾಸ ದಿಂದಲೂ ಅವನೆಡೆಗೆ ತಿರುಗಿ ಮಾರ್ಗದರ್ಶನಕ್ಕಾಗಿ ಅವ ನೊಡನೆ ಯಾಚಿಸಬೇಕಾಗಿದೆ. ಅವನ ಮಾರ್ಗದರ್ಶನ ಹಲವು ವಿಧನಲ್ಲಿರಬಹುದು. ಅಣು ಆಯುಧಗಳ ದುರು ಪಯೋಗವನ್ನು ಪ್ರತಿರೋಧಿಸುವ ಅಥವಾ ಅದರ ಕೆಡುಕು ಗಳಿಂದ ಸುರಕ್ಷಿತವಾಗುವ ಜ್ಞಾನವನ್ನು ದೇವನು ಬಹಿರಂಗ ಪಡಿಸಲೂ ಬಹುದು. ಅಥವಾ ಈ ಮಾರಕಾಯುಧಗಳ ನಿಯಂತ್ರಣಾಧಿಕಾರ ವಹಿಸಿರುವವರ ಹೃದಯದಲ್ಲಿ ಒಂದು ಪರಿವರ್ತನೆ ಉಂಟು ಮಾಡಿ, ಅಣುಶಕ್ತಿ ಮನುಷ್ಯನ ಒಳಿತಿ ಗಾಗಿ ಮಾತ್ರ ಉಪಯೋಗಿಸಲ್ಪಡುವುದೆಂದೂ ಮನುಷ್ಯನ ಕೆಡುಕಿಗೂ ನಾಶಕ್ಕೂ ವಿನಿಯೋಗಿಸಲ್ಪಡಲಾರದೆಂದೂ ತೀ ರ್ಮಾನಿಸಲು ಅವರನ್ನು ಪ್ರಚೋದಿತರನ್ನಾಗಿ ಮಾಡಲೂ ಬಹುದು. ಹಾಗಲ್ಲವಾದರೆ, ಅಣುಶಕ್ತಿಯನ್ನು ಮನುಷ್ಯನ ಕೆಡುಕು ಮತ್ತು ನಾಶಕ್ಕಾಗಿ ವಿನಿಯೋಗಿಸಲಿಕ್ಕೆ ತೀರ್ಮಾ ನಿಸುವ ರಾಷ್ಟ್ರನಾಯಕರನ್ನು ಅವರ ಉನ್ನತವಾದ ಅಧಿಕಾರ ಪೀಠಗಳಿಂದ ಹೊರದಬ್ಬಿ ಆ ಸ್ಥಾನಗಳಲ್ಲಿ ಮನುಷ್ಯ ವಂಶದ ಯಥಾರ್ಥ ಕ್ಷೇಮಾಕಾಂಕ್ಷಿಗಳನ್ನು ಉಪವಿಷ್ಟರಾ ಗಿರಿಸಲಿಕ್ಕೂ, ಆ ಮೂಲಕ ವಿಜ್ಞಾನದ ಚಕ್ರವಾಳಗಳು ವಿಕಾಸಗೊಂಡು ಮನುಷ್ಯನ ಹೃದಯತಳಗಳಲ್ಲಿ ಹುಟ್ಟುವ ಭೀತಿ ಇಲ್ಲದಂತಾಗಲಿಕ್ಕೂ, ಅದರೊಂದಿಗೆ ಅಪ್ರತಿಹತ ಪ್ರಗತಿ ಹಾಗೂ ಸೀಮಾತೀತ ಸುಖಸೌಭಾಗ್ಯಗಳು ಒದಗು ವರೆ ಸಹಾಯಕವಾದ ವಾತಾವರಣಗಳನ್ನು ದೇವನು ಸೃಷ್ಟಿಸಲೂ ಬಹುದು.

"ಓ ನಾಥಾ, ಸರ್ವಾಧಿರಾಜನೇ, ನೀನು ಇಚ್ಛಿಸು ವವರಿಗೆ ನೀನು ಅಧಿಕಾರ ನೀಡುತ್ತೀ; ನೀನು ಇಚ್ಛಿಸುವವ ರಿಂದ ನೀನು ಅದನ್ನು ಹಿಡಿದು ಎಳೆಯುತ್ತೀ; ನೀನು ಇಚ್ಛಿ ಸುವವರಿಗೆ ನೀನು ವಿಜಯವನ್ನು ನೀಡುತ್ತೀ; ನೀನು ಇಚ್ಛಿ ಸುವವರನ್ನು ಪರಾಜಯಗೊಳಿಸುತ್ತೀ. ಎಲ್ಲಾ ಒಳಿತುಗಳು ನಿನ್ನಲ್ಲಿ ಅಡಕವಾಗಿವೆ. ನೀನು ಎಲ್ಲಾ ವಸ್ತುಗಳ ಮೇಲೆ ಸರ್ವಾಧಿಕಾರಿಯಾಗಿದ್ದೀ. ನೀನು ಹಗಲಿನಲ್ಲಿ ಇರುಳು ಪ್ರವೇಶಿಸುವಂತೆ ಮಾಡುತ್ತೀ; ನೀನೇ ಇರುಳಿನಿಂದ ಬೆಳಕ ನ್ನೂ ಉಂಟುಮಾಡುತ್ತೀ, ನೀನು ಮೃತರಾದವರಿಂದ ಬದು ಕಿಸುತ್ತೀ; ಜೀವಂತರಿಂದ ಮೃತಗೊಳಿಸುತ್ತೀ. ನೀನು ಇಚ್ಛಿಸುವವರಿಗೆ ನೀನು ಅಪರಿಮಿತವಾಗಿ ಕೊಡುತ್ತೀ" (3:27, 28).

ಸಂಕ್ಷಿಪ್ತವಾಗಿ, ನಾವೆಲ್ಲರೂ ನಮ್ಮ ವಲಯಗಳಲ್ಲೂ ನಮ್ಮ ಹೃದಯ ಕುಟೀರಗಳಲ್ಲೂ ಪ್ರತಿಷ್ಠಿಸಿರುವ ಆ ಕೃತ್ರಿಮ ದೈವಗಳನ್ನು ಪರಿತ್ಯಜಿಸಿ, ಪೂರ್ಣವಾಗಿಯೂ ಆತ್ಮಾರ್ಥವಾಗಿಯೂ ವಿಶ್ವಾಸದಿಂದಲೂ ಆ ಸತ್ಯದೇವನಿಗೆ ನಮ್ಮನ್ನೇ ಸಮರ್ಪಿಸಿಕೊಂಡು, ಮಾರ್ಗದರ್ಶನಕ್ಕಾಗಿ ವಿನೀತರಾಗಿ ಅವನೊಡನೆ ಪ್ರಾರ್ಥಿಸುತ್ತಲೂ ನಮಗೆ ರಕ್ಷೆ ನೀಡಲಿಕ್ಕಾಗಿ ಅವನೊಡನೆ ಯಾಚಿಸುತ್ತಲೂ ಇರೋಣ.

-+++++++++-


# ಸ್ನೇಹ ಮತ್ತು ಸೌಹಾರ್ದದ ಸಂದೇಶ

**(700 ವರ್ಷಗಳ ನಂತರ ಸ್ಪೈಯಿನಿನಲ್ಲಿ ಮೊತ್ತ ಮೊದಲು ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಬಿಶಾರತ್ ಮಸೀದಿಯ ಉದ್ಘಾಟನೆಯನ್ನು ಮಾಡುತ್ತಾ ಕಳೆದ ವರ್ಷ ಸಪ್ಟೆಂಬರ್ 10ನೇ ತಾರೀಕಿನಂದು ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಮಾಡಿದ ಭಾಷಣ )**

ಅತ್ಯಂತ ದಯಾಮಯನೂ ಸದಾ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ ನಾನಿಂದು ಈ ಮಸೀದಿಯನ್ನು ಉದ್ಘಾಟಿಸುತ್ತಿದ್ದೇನೆ. ಪರಮ ದಯಾಳು, ಕರುಣಾಳು ಮತ್ತು ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಸ್ತುತಿಯಿಂದ ನನ್ನ ಹೃದಯ ನಿರ್ಭರವಾಗಿದೆ. ಆಕಾಶ ಭೂಮಿ ಮತ್ತು ಅವುಗಳ ಮಧ್ಯದಲ್ಲಿರುವ ಸಕಲ ಚರಾಚರಗಳ ಯಜಮಾನ ಅವನಾಗಿರುವನು. ತಾತ್ಕಾಲಿಕವಾದ ಏನಾದರೂ ಒಡೆಯತ್ವ ಇದ್ದರೂ ಅದು ಕೊನೆಗೆ ಅವನಿಗೇ ಸೇರುತ್ತದೆ. ಏಕನಾದ ಅವನಲ್ಲದೆ ಯಥಾರ್ಥವಾಗಿ ಬೇರಾವ ಒಡೆಯನೂ ಇಲ್ಲ. ಅವನಿಗೆ ಯಾರೂ ಸಹಭಾಗಿ ಇಲ್ಲ. ಅವನನ್ನು ಮಾತ್ರ ಆರಾಧಿಸಲಿಕ್ಕಾಗಿ ಇಂದು ಈ ಮಸೀದಿಯ ಉದ್ಘಾಟನೆ ಮಾಡಲಾಗುತ್ತಿದೆ. ಸರಿಯಾದ ರೀತಿಯಲ್ಲಿರುವ ಆರಾಧನೆಯ ಸೌಭಾಗ್ಯಕ್ಕಾಗಿ ನಾವು ಅವನೊಡನೆ ಮಾತ್ರ ಅಪೇಕ್ಷಿಸುತ್ತೇವೆ. ಅವನ ಮಾಗದರ್ಶನ ಮತ್ತು ಸಹಾಯ ವಿನಾ ಯಥಾರ್ಥವಾದ ಆರಾಧನೆಯ ಸೌಭಾಗ್ಯ ಯಾರಿಗೂ ಲಭಿಸಲಾರದು. ಆದ್ದರಿಂದ ನಮ್ಮ ಆತ್ಮಗಳು ಇಂದು ಅವನ ಸನ್ನಿಧಿಯಲ್ಲಿ ಶರಣಾಗಿ ಹೀಗೆ ಪ್ರಾರ್ಥಿಸುತ್ತಿವೆ: ಓ ಸರ್ವವಿಧ ಸನ್ಮಾರ್ಗದ ಉಗಮ ಆಗಿರುವ ಅಲ್ಲಾಹ್, ನೀನು ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು. ಅನುಗ್ರಹೀತರೂ ಸತ್ಯವಂತರೂ ಆದ ಜನರು ತಲಪಿರುವ ಗುರಿಗೆ ತಲಪಲು ನೀನು ನಮಗೆ ಸನ್ಮಾರ್ಗದಲ್ಲಿ ಸ್ಥಿರತೆ ನೀಡು. ನಿನ್ನ ಅನುಗ್ರಹಕ್ಕೆ ಪಾತ್ರರಾದವರು ಆ ಸನ್ಮಾರ್ಗದಲ್ಲಿ ಚಲಿಸುತ್ತಾ ಕೊನೆಗೆ ನಿನ್ನ ಸನ್ನಿಧಿಯಲ್ಲಿ ಬಂದು ತಲಪಿದ್ದಾರೆ. ಎಲ್ಲಾ ಪ್ರಕಾಶದ ಉದ್ಭವ ಸ್ಥಾನ, ಎಲ್ಲಾ ಸನ್ಮಾರ್ಗದ ಉಗಮ, ಹಾಗೂ ನಿತ್ಯನೂ ಆಗಿರುವ ಅಲ್ಲಾಹನೇ, ನಿನ್ನ ಸತ್ಯವಾದ ಮಾರ್ಗದಲ್ಲಿ ಚಲಿಸುತ್ತಾ ಆ ಮಾರ್ಗದಲ್ಲಿ ನಿರ್ವಹಿಸಬೇಕಾದ ಎಲ್ಲಾ ಕರ್ತವ್ಯಗಳನ್ನು ಪೂರ್ತಿಗೊಳಿಸಲು ಸಾಧ್ಯವಾಗದೆ ನಿನ್ನ ಅನುಗ್ರಹದ ಬದಲಿಗೆ ನಿನ್ನ ಕೋಪಕ್ಕೆ ಗುರಿಯಾದ ದುರ್ಭಾಗ್ಯವಂತರ ದುಸ್ಥಿತಿಯಿಂದ ನೀನು ನಮ್ಮನ್ನು ಕಾಪಾಡು. ಹಾಗೆಯೇ ನಿನ್ನ ಸನ್ಮಾರ್ಗದಲ್ಲಿ ಅಲ್ಪದೂರ ಚಲಿಸಿದ ನಂತರ ಅದನ್ನು ತ್ಯಜಿಸಿ ನಿನ್ನ ಸತ್ಪಥವೆಂಬ ಪ್ರಕಾಶದಿಂದ ಅಗಲಿ ಪೈಶಾಚಿಕ ಅಂಧಕಾರದ ದಾರಿಯಲ್ಲಿ ಬಿದ್ದು ಮಾರ್ಗಭ್ರಂಶರಾದವರ ದುರ್ಗತಿಯಿಂದಲೂ ನೀನು ನಮ್ಮನ್ನು ರಕ್ಷಿಸು.

ಈ ಮಸೀದಿಯ ಉದ್ಘಾಟನಾ ದಿನವಾದ ಇಂದು ನಮ್ಮ ಹೃದಯಗಳು ಅಲ್ಲಾಹನ ಸ್ತುತಿಸ್ತೋತ್ರಗಳಿಂದ ತುಂಬಿಕೊಂಡಿವೆ. ಅವನ ಕುರಿತುಳ್ಳ ಮಾತುಗಳು ನಮ್ಮ ನಾಲಗೆಗಳಲ್ಲಿ ನಿರರ್ಗಳವಾಗಿ ಬರುತ್ತಿವೆ. ಅವನ ಸ್ಮರಣೆ ನಮ್ಮ ಶರೀರ ಮತ್ತು ಆತ್ಮದ ಪ್ರತಿಯೊಂದು ಕಣದಲ್ಲೂ ಅಡಕವಾಗಿದೆ. ನಾವೆಲ್ಲ ಒಟ್ಟಾಗಿ ಪ್ರಾರ್ಥನೆಯ ಒಂದು ಪ್ರತೀಕವಾಗಿ ಮಾರ್ಪಟ್ಟಿರುವೆವು. ಓ ಅಲ್ಲಾಹ್, ನಿನ್ನನ್ನು ಮಾತ್ರ ಆರಾಧಿಸಲಿಕ್ಕಾಗಿ ನಿನ್ನ ನಾಮದಲ್ಲಿ ನಿರ್ಮಿಸಲ್ಪಡುವ ಮಸೀದಿಗೆ ಸಂಬಂಧಿಸಿದ ಎಲ್ಲಾ ವಿಧ ಜವಾಬ್ದಾರಿಕೆಗಳನ್ನು ನೆರವೇರಿಸುವ ಸೌಭಾಗ್ಯವನ್ನೂ ಮಹತ್ತಾದ ಮೌಲ್ಯ ಸಂರಕ್ಷಣೆಯ ಸಾಮರ್ಥ್ಯವನ್ನೂ ನೀನು ನಮಗೆ ನೀಡು.

ನೀನು ಏಕನೆಂದು ತಿಳಿದುಕೊಂಡು ನಿನ್ನನ್ನು ಆರಾಧಿಸಲಿಕ್ಕಾಗಿ ನಿನ್ನ ಪ್ರಾರ್ಥನಾಲಯಕ್ಕೆ ಬರಲು ಇಚ್ಛಿಸುವ ಸರ್ವರಿಗೂ ಜಾತಿ ಮತ ವರ್ಣ ಭೇಧವಿಲ್ಲದೆ ಅದರ ಬಾಗಿಲು ಸದಾ ತೆರೆದಿರಿಸಲ್ಪಡಲಿ. ಅಲ್ಲಾಹನ ಭವನದಲ್ಲಿ ಪ್ರವೇಶಿಸುವುದರಿಂದ ಯಾರಿಗೂ ಯಾರನ್ನೂ ತಡೆಯಲು ಸಾಧ್ಯವಿಲ್ಲ. ಆದರೆ ಕಲಹವನ್ನುಂಟು ಮಾಡಲು ಮತ್ತು ಆರಾಧನೆಯ ಬದಲಿಗೆ ದ್ರೋಹವನ್ನೆಸಗುವ ಉದ್ದೇಶದಿಂದ



ಬಿಶಾರತ್ ಮಸೀದಿ, ಪೆದ್ರೋ ಆಬಾದ್, ಸ್ಪೈನ್.

ನಿನ್ನ ಈ ಪವಿತ್ರ ಭವನದಲ್ಲಿ ಪ್ರವೇಶಿಸಲಿಕ್ಕೆ ಪ್ರಯತ್ನಿಸುವವರ ಕಾರ್ಯ ನಾವು ನಿನಗೇ ಬಿಟ್ಟು ಕೊಡುತ್ತೇವೆ; ನಿನ್ನೊಡನೆ ನಾವು ಅಪೇಕ್ಷಿಸುತ್ತೇವೆ, ನಿನ್ನಲ್ಲಿ ಮಾತ್ರ ನಾವು ವಿಶ್ವಾಸವನ್ನಿಡುತ್ತೇವೆ; ಅಂತಹ ಅಪರಿಶುದ್ಧ ಜನರ ಪಾದದಿಂದ ನಿನ್ನ ಈ ಪವಿತ್ರ ಮನೆಯನ್ನು ಮಲಿನಗೊಳಿಸುವ ಶಕ್ತಿಯನ್ನು ನೀನು ಅವರಿಗೆ ನೀಡಬಾರದೆಂದು. ಓ ಅಲ್ಲಾಹ್, ನಿನ್ನ ಸ್ಮರಣೆಗೆ ಮಾತ್ರ, ನಿನ್ನ ಹೆಸರಿನಲ್ಲಿ ನಿರ್ಮಿಸಲ್ಪಟ್ಟ ಈ ಮಸೀದಿಗೆ ಸಂಬಂಧಿಸಿದ ಮಹತ್ತಾದ ಸಂದೇಶವನ್ನು ಸದಾ ಸ್ಮರಿಸುವ ಸೌಭಾಗ್ಯ ಸಹ ನೀನು ನಮಗೆ ನೀಡು. ಆ ಸಂದೇಶ ಯಾವುದು? ಅದು ಶಾಂತಿ ಮತ್ತು ಸಮಾಧಾನದ ಸಂದೇಶವಾಗಿದೆ. ಅದು, ಮನುಷ್ಯರ ಅನ್ಯೋನ್ಯ ನೀತಿ ಮತ್ತು ಸಮತ್ವದ ಹಾಗೂ ಸ್ನೇಹ ಮತ್ತು ಸೌಹಾರ್ದದ ಸಂದೇಶವಾಗಿದೆ. ಆ ಸಂದೇಶವೇನೆಂದರೆ, ಯಾವ ರೀತಿಯಲ್ಲಿ ನಿಮ್ಮ ದೈವ ಏಕನಾಗಿರುವನೋ, ಆ ಏಕನಾದ ದೇವನನ್ನು ಆರಾಧಿಸುವ ನೀವು ಸಹ ಭೂಮಿಯಲ್ಲಿ ಏಕೋದರ ಸಹೋದರ ಭಾವದಿಂದ ವರ್ತಿಸಬೇಕೆಂದೂ ನಿಮ್ಮ ಹೃದಯದಿಂದ ಎಲ್ಲಾ ವಿಧ ಹಗೆ, ದ್ವೇಷ, ವಿರೋಧ, ಅಸೂಯೆಗಳನ್ನು ತೊಲಗಿಸಬೇಕೆಂದೂ ಏಕನಾದ ದೇವನ ದಾಸರೆಡೆಯಲ್ಲಿ ಭಿನ್ನತೆಯನ್ನುಂಟು ಮಾಡುವ ಎಲ್ಲವನ್ನೂ ನೀವು ತ್ಯಜಿಸಬೇಕೆಂದೂ ಆಗಿದೆ. ಈ ಮಸೀದಿ ಈ ಯಾಥಾರ್ಥ್ಯವನ್ನು ಐದು ಹೊತ್ತೂ ಉಚ್ಚಸ್ವರದಲ್ಲಿ ಅಝಾನ್ (ಪ್ರಾರ್ಥನೆಗೆ ಕರೆ) ಮೂಲಕ ನೆನಪಿಸುತ್ತದೆ. ಅದೇನೆಂದರೆ, ನಿಮ್ಮ ದೇವನು ಏಕನು; ನೀವೆಲ್ಲಾ ಆ ಏಕನಾದ ದೇವನ ದಾಸರು; ಎಲ್ಲಾ ಉನ್ನತಸ್ಥಾನ ಅವನಿಗೆ ಮಾತ್ರ; ಅವನು ಮಾತ್ರ ಆರಾಧನೆಗೆ ಅರ್ಹನು. ಆದ್ದರಿಂದ ಓ ಮನುಷ್ಯ ಸಮುದಾಯವೇ, ನೀವು ಒಂದುಗೂಡಲು ಇಚ್ಛಿಸುವಿರಾದರೆ ಏಕನಾದ ಆ ದೇವನೊಡನೆ ನಿಮ್ಮ ಬಂಧವನ್ನು ಭದ್ರಗೊಳಿಸಿರಿ; ಅವನೇ ನಿಮ್ಮೆಲ್ಲರ ದೇವನಾಗಿದ್ದಾನೆ.

ಉನ್ನತನಾದ ದೇವನ ಸ್ಥಾನ ಮಹಾತ್ಮೆಯನ್ನು ಕೀರ್ತನೆ ಮಾಡಲಿಕ್ಕೂ ಸ್ತುತಿಗಾನ ಮಾಡಲಿಕ್ಕೂ ಅವನನ್ನು ಆರಾಧಿಸಲಿಕ್ಕೂ ನಿರ್ಮಿಸಲ್ಪಡುವ ಪ್ರತಿಯೊಂದು ಮಸೀದಿಯೂ ಅಲ್ಲಾಹನ ದಾಸನೂ ಪ್ರವಾದಿಯೂ ಆದ ಮುಹಮ್ಮದ್ ಪೈಗಂಬರರು ತನ್ನ ನಿಧನದ ಮೊದಲು ಕೊನೆಯ ಹಜ್ ವೇಳೆಯಲ್ಲಿ ಮಾಡಿದ ಮಹತ್ತಾದ ಭಾಷಣವನ್ನು ನಮ್ಮ ಸ್ಮೃತಿಪಟಲದಲ್ಲಿ ತರುತ್ತದೆ. ಆ ಇತಿಹಾಸ ಪ್ರಸಿದ್ಧ ಭಾಷಣ ಅಲ್ಲಾಹನ ಏಕತ್ವ ಸಿದ್ಧಾಂತದ ಕುರಿತು ನಮಗೆ ತಿಳುವಳಿಕೆ ನೀಡುತ್ತದೆ ಹಾಗೂ ಏಕನಾದ ಅಲ್ಲಾಹನನ್ನು ಆರಾಧಿಸುವ ಆವಶ್ಯಕತೆಯನ್ನು ನಮಗೆ ಸ್ಪಷ್ಟವಾಗಿ ಮನಗಾಣಿಸುತ್ತದೆ. ಅಲ್ಲಾಹನ ಸೃಷ್ಟಿಗಳೊಡನೆ ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸದೆ ಸೃಷ್ಟಿಕರ್ತನಾದ ಅಲ್ಲಾಹನೊಡನಿರುವ ಕರ್ತವ್ಯವನ್ನು ನೆರವೇರಿಸಲು ಸಾಧ್ಯವಲ್ಲವೆಂದೂ ಆ ಭಾಷಣ ನಮಗೆ ಕಲಿಸುತ್ತದೆ. ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನೊಡನೆ ಮಾಡಬೇಕಾದ ಎಲ್ಲಾ ವಿಧ ಕರ್ತವ್ಯಗಳನ್ನೂ

ಒಂದೊಂದಾಗಿ ಅದರಲ್ಲಿ ಹೇಳಲಾಗಿದೆ. ಸೃಷ್ಟಿಗಳೊಡನೆ ಇರುವ ಕರ್ತವ್ಯಗಳನ್ನು ನೆರವೇರಿಸದ ಪಕ್ಷದಲ್ಲಿ ಸೃಷ್ಟಿಗಳಿಂದ ಮಾತ್ರವಲ್ಲ, ಸೃಷ್ಟಿಕರ್ತನಿಂದ ಕೂಡ ಅಂತಹವರು ಅಗಲಲ್ಪಡುವರೆಂದು ಅದು ನಮಗೆ ಬೋಧಿಸುತ್ತದೆ. ಕಾಲವು ಆ ಭಾಷಣದ ಜೀವಸತ್ವವನ್ನು ಕುಂದಿಸಲಿಲ್ಲ. 1400 ವರ್ಷಗಳು ಕಳೆದ ನಂತರ ಇಂದು ಸಹ ಅದು ಅಂದಿನಂತೆಯೇ ಹೊಚ್ಚ ಹೊಸದಾಗಿ ಹೊಳೆಯುತ್ತದೆ. ಮುಹಮ್ಮದ್ ಪೈಗಂಬರರು ಆ ಸಂದರ್ಭದಲ್ಲಿ ಅಲ್ಲಿ ಸನ್ನಿಹಿತರಾಗಿದ್ದ ಏಕದೈವ ವಿಶ್ವಾಸಿಗಳಾದ ಜನರನ್ನು ಸಂಬೋಧಿಸುತ್ತಾ ಈ ರೀತಿ ಹೇಳಿದರು :

"ಓ ಮನುಷ್ಯರೇ, ತಿಳಿದುಕೊಳ್ಳಿರಿ; ನಿಮ್ಮೆಲ್ಲರ ದೈವ ಏಕನು; ನಿಮ್ಮೆಲ್ಲರ ಆದಿಪಿತನೂ ಒಬ್ಬನೇ. ಅರಬಿಗೆ ಅರಬಿಯಲ್ಲದವನ ಮೇಲಾಗಲಿ, ಅರಬಿಯಲ್ಲದವನಿಗೆ ಅರಬಿಯ ಮೇಲಾಗಲಿ ಯಾವ ಶ್ರೇಷ್ಠತೆಯೂ ಇಲ್ಲ. ಹಾಗೆಯೇ ಬಿಳಿಯವನಿಗೆ ಕರಿಯವನಿಗಿಂತಾಗಲಿ ಕರಿಯವನಿಗೆ ಬಿಳಿಯವನಿಗಿಂತಾಗಲಿ ಯಾವ ಶ್ರೇಷ್ಠತೆಯೂ ಇಲ್ಲ. ಮನುಷ್ಯನ ಜೀವದ ಸಂಬಂಧಿಸಿ ಮತ್ತು ಸಂಪತ್ತಿನ ಸಂಬಂಧಿಸಿ ಅಜ್ಞತೆಯ ಕಾಲದಲ್ಲಿದ್ದ ಎಲ್ಲಾ ತಪ್ಪಾದ ಸಂಪ್ರದಾಯಗಳನ್ನೂ ನಾನು ಇಂದಿನಿಂದ ಅಂತ್ಯ ದಿನದ ವರೆಗೆ ಕೊನೆಗೊಳಿಸಿರುವೆನು. ಅಂತಹ ತಪ್ಪು ರೂಢಿಗಳನ್ನು ನಾನು ನನ್ನ ಕಾಲಿನಡಿಯಲ್ಲಿ ಹಾಕಿ ತುಳಿಯುತ್ತೇನೆ. ಜಾಗ್ರತೆ! ಯಾರೂ ಅನ್ಯರ ಹಕ್ಕುಗಳನ್ನು ಭಂಗಪಡಿಸಬೇಡಿರಿ; ಎಚ್ಚರಿಕೆ! ಯಾರೂ ಅನ್ಯರ ಹಕ್ಕುಗಳನ್ನು ಹಾನಿಗೊಳಿಸಬೇಡಿರಿ; ಜೋಕೆ! ಯಾರೂ ಅನ್ಯರ ಹಕ್ಕುಗಳನ್ನು ಕಸಿಯಬೇಡಿರಿ. ಅಜ್ಞತೆಯ ಕಾಲದಲ್ಲಿ ಮಾಡಲಾದ ಕೊಲೆಪಾತಕದ ಮುಯ್ಯಿತೀರಿಸುವುದನ್ನು ತಡೆಯಲಾಗಿದೆ. ಅಜ್ಞತೆಯ ಕಾಲದಲ್ಲಿ ಕೊಡಲು ನಿಶ್ಚಯಿಸಲಾದ ಎಲ್ಲಾ ಬಡ್ಡಿಯನ್ನು (ಅದು ಮನುಷ್ಯನ ಹಕ್ಕನ್ನು ಹಾನಿಗೊಳಿಸುವ ಸಂಪ್ರದಾಯವಾಗಿದೆ) ಇಂದು ನಿಲ್ಲಿಸಲಾಗಿದೆ. ಸ್ತ್ರೀಯರ ಹಕ್ಕುಗಳ ಸಂಬಂಧಿಸಿ ಸಹ ನೀವು ಅಲ್ಲಾಹನಿಗೆ ಭಯಪಡಿರಿ; ನಿಮಗೆ ಸ್ತ್ರೀಯರ ಮೇಲೆ ಹಕ್ಕುಗಳಿರುವಂತೆಯೇ ಸ್ತ್ರೀಯರಿಗೆ ನಿಮ್ಮ ಮೇಲೆ ಸಹ ಹಕ್ಕುಗಳಿವೆ. ಕೈದಿಗಳ ಕುರಿತು ಸಹ ಗಮನವಿರಲಿ. ನೀವು ಭುಜಿಸುವಂತಹ ಆಹಾರವನ್ನೇ ಅವರಿಗೂ ಉಣ್ಣಿಸಿರಿ. ನೀವು ಧರಿಸುವಂತಹ ವಸ್ತ್ರವನ್ನೇ ಅವರಿಗೂ ಉಡಿಸಿರಿ. ನೆನಪಿಡಿರಿ, ನಿಮ್ಮೆಲ್ಲಾ ಜೀವವನ್ನೂ ಸೊತ್ತನ್ನೂ ಮಾನವನ್ನೆಲ್ಲಾ ಪರಸ್ಪರ ಸಂರಕ್ಷಿಸಬೇಕಾದುದು ನಿಮ್ಮ ಕರ್ತವ್ಯವಾಗಿದೆ, ನೀವು ನಿಮ್ಮ ಪರಿಪಾಲಕನನ್ನು ಸಂಧಿಸುವ ದಿನದ ವರೆಗೆ."

ಈ ಮಹತ್ತಾದ ಸಂದೇಶದ ಸಂರಕ್ಷಣೆಗಾಗಿ, ಅದರ ಜೀವಸತ್ತ್ವವನ್ನು ಬಾಕಿಯುಳಿಸಲಿಕ್ಕಾಗಿ ಮುಹಮ್ಮದ್ ಪೈಗಂಬರರ ದಾಸರ ಪೈಕಿ ಮಹಾತ್ಮನಾದ ಓರ್ವ ದಾಸನನ್ನು ಅಲ್ಲಾಹನು ಈ ಕಾಲದಲ್ಲಿ ಇಮಾಂ (ಮತ ಸುಧಾರಕ) ಆಗಿ ನಿಯೋಗಿಸಿರುವನು – ಪೈಗಂಬರರ ಆ ಮಹತ್ತಾದ ಅಧ್ಯಾಪನೆಗಳ ಬಗ್ಗೆ ನಮಗೆ ನೆನಪು ಹುಟ್ಟಿಸಲಿಕ್ಕಾಗಿ ಮತ್ತು ಆ ಪವಿತ್ರ ಪ್ರವಾದಿಯ ಮಾದರಿಯನುಸಾರ ಇನ್ನೊಂದು ಜಮಾಅತನ್ನು ಸ್ಥಾಪಿಸಲಿಕ್ಕಾಗಿ; ಪರಿಶುದ್ಧ ಇಸ್ಲಾಮಿಕ ಅಧ್ಯಾಪನಗಳಿಗೆ ಮನುಷ್ಯನ ಸತ್ಕರ್ಮವೆಂಬ ಮೂಸೆಯಲ್ಲಿ ರೂಪುಗೊಡಲಿಕ್ಕಾಗಿ. ಆ ಮಹಾತ್ಮನಾದ ದಾಸ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಆಗಿದ್ದಾರೆ. ಅವರನ್ನು ಅಲ್ಲಾಹನು ಹಿಜರಿ 14ನೇ ಶತಮಾನದ ಆದಿಯಲ್ಲಿ ಮಹ್‌ದೀ ಮಸೀಹಾಗಿ ನಿಯೋಗಿಸಿದ್ದಾನೆ. ಮುಹಮ್ಮದೀ ಸಮುದಾಯಕ್ಕಾಗಿ ಅವರು ಒಂದು ನವ ಚೈತನ್ಯದ ಸಂದೇಶ ತಂದಿರುವರು. ಲೋಕವನ್ನಿಡೀ ಇಸ್ಲಾಮಿನ ಪತಾಕೆಯ ಕೆಳಗೆ ಒಂದುಗೂಡಿಸುವ ಮಹತ್ತಾದ ಕಾರ್ಯವನ್ನು ಅವರು ಆರಂಭಿಸಿದರು; ಒಂದು ಜಮಾಅತನ್ನು ಸ್ಥಾಪಿಸಿದರು. ಇಸ್ಲಾಂ ಮತ್ತು ಮನುಷ್ಯವಂಶದ ಸೇವೆಯಾಗಿದೆ ಆ ಸಂಘಟನೆಯ ಲಕ್ಷ್ಯ. ಅದೇ ಆಗಿದೆ ಅಹ್ಮದಿಯಾ ಜಮಾಅತ್. ಈ ಕಾಲಘಟ್ಟದ ಮನುಷ್ಯವರ್ಗವನ್ನು ಸಂಬೋಧಿಸುತ್ತಾ ಆ ಮಹಾತ್ಮ ಹೀಗೆ ಹೇಳಿದರು :

"ಸಕಲ ಸಂಪೂರ್ಣನೂ ಸತ್ಯಸ್ವರೂಪನೂ ಆದ ಯಾವ ದೇವನೊಡನೆ ವಿಶ್ವಾಸವಿರಿಸಬೇಕಾದುದು ಮನುಷ್ಯನ ಕರ್ತವ್ಯವಾಗಿದೆಯೋ ಆ ದೇವನು ಸರ್ವಲೋಕ ಪರಿಪಾಲಕನಾಗಿದ್ದಾನೆ. ಅವನ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗಾಗಲಿ, ಪ್ರತ್ಯೇಕ ಕಾಲಕ್ಕಾಗಲಿ, ಪ್ರತ್ಯೇಕ ರಾಜ್ಯಕ್ಕಾಗಲಿ ಸೀಮಿತವಲ್ಲ. ತದ್ವಿರುದ್ಧವಾಗಿ, ಅವನು ಎಲ್ಲಾ ಜಾತಿಯವರ, ಎಲ್ಲಾ ಕಾಲಗಳ, ಎಲ್ಲಾ ರಾಜ್ಯಗಳ ಪರಿಪಾಲಕನಾಗಿದ್ದಾನೆ. ಸಕಲ ಅನುಗ್ರಹಗಳ ಮೂಲ ಅವನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವ ಶಕ್ತಿಗಳ ಆರಂಭ ಅವನಿಂದಾಗಿದೆ. ಪ್ರಪಂಚದಲ್ಲಿರುವ ಎಲ್ಲಾ ಸೃಷ್ಟಿಗಳನ್ನು ಸಾಕಿ ಸಲಹು

ವವನು ಅವನೇ ಆಗಿದ್ದಾನೆ. ಸಕಲ ವಸ್ತುಗಳೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹ ಸಕಲ ಜಾತಿಗಳಲ್ಲೂ ಸಕಲ ರಾಜ್ಯಗಳಲ್ಲೂ ಸಕಲ ಯುಗಗಳಲ್ಲೂ ಸರ್ವವ್ಯಾಪಕವಾಗಿದೆ.........ಹೀಗೆ ನಮ್ಮ ದೇವನ ಸ್ವಭಾವ ಈ ರೀತಿಯಾಗಿರುವಾಗ, ಅವನ ದಿವ್ಯ ಗುಣಗಳನ್ನು ನಾವು ಸಹ ನಮ್ಮ ಜೀವನ ಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ." ( ಪೈಗಾಮೆ ಸುಲ್ಹ್).

ಅವರು ಮತ್ತೂ ಹೇಳಿದರು: "ದೈವೇಕತ್ವವನ್ನು ಭೂಮಿಯಲ್ಲಿ ಹರಡಿಸಲಿಕ್ಕಾಗಿ ನೀವು ನಿಮ್ಮ ಪೂರ್ಣ ಶಕ್ತಿಗಳನ್ನು ಉಪಯೋಗಿಸಿ ಪರಿಶ್ರಮಿಸಿರಿ. ಅವನ ದಾಸರಾದ ಎಲ್ಲರೊಡನೆ ನೀವು ಕರುಣೆ ತೋರಿಸಿರಿ. ಮಾತಿನಿಂದಾಗಲಿ, ಕೈಯಿಂದಾಗಲಿ, ಬೇರಾವ ವಿಧದಲ್ಲಾಗಲಿ ಯಾರನ್ನೂ ಪೀಡಿಸಬೇಡಿರಿ. ಸೃಷ್ಟಿಗಳ ಒಳಿತಿಗಾಗಿ ಪ್ರಯತ್ನಿಸುತ್ತಾ ಇರಿ". (ಕಿಶ್ತೀ ನೂಹ್)

ತನ್ನ ನಿಯೋಗೋದ್ದೇಶವನ್ನು ವಿಶದಪಡಿಸುತ್ತಾ ಅವರು ಹೀಗೆ ಹೇಳಿದರು: "ನಾನು ನೈತಿಕ, ಧಾರ್ಮಿಕ ಹಾಗೂ ವಿಶ್ವಾಸಕ್ಕೆ ಸಂಬಂಧಿಸಿದ ನ್ಯೂನತೆಗಳನ್ನೂ ತಪ್ಪು ತಿಳುವಳಿಕೆಗಳನ್ನೂ ತಿದ್ದಲಿಕ್ಕೋಸ್ಕರ ಲೋಕಕ್ಕೆ ಕಳುಹಿಸಲ್ಪಟ್ಟಿರುವೆನು. ಹಝ್ರತ್ ಈಸಾನಬಿ (ಪ್ರವಾದಿ ಯೇಸು)ಗೆ ಸದೃಶನಾಗಿ ನಾನು ಬಂದಿರುವೆನು. ಈ ಅರ್ಥದಲ್ಲಿ ನಾನು ವಾಗ್ದತ್ತ ಮಸೀಹ್. ಅಸಾಮಾನ್ಯ ಕುರುಹುಗಳ ಮೂಲಕವೂ ಪರಿಶುದ್ಧ ಅಧ್ಯಾಪನಗಳ ಮೂಲಕವೂ ಲೋಕದಲ್ಲಿ ಸತ್ಯವನ್ನು ಪ್ರಸರಿಸಲಿಕ್ಕಾಗಿ ನಾನು ಆಜ್ಞಾಪಿಸಲ್ಪಟ್ಟಿರುವೆನು. ಮತಕ್ಕಾಗಿ ಖಡ್ಗ ಪ್ರಯೋಗಿಸುವುದಕ್ಕೂ ಮತದ ಹೆಸರಿನಲ್ಲಿ ಮನುಷ್ಯರಕ್ತ ಹರಿಯಿಸುವುದಕ್ಕೂ ನಾನು ವಿರೋಧಿ. ನನ್ನ ಕೈಲಾದಷ್ಟರ ಮಟ್ಟಿಗೆ. ಮುಸ್ಲಿಮರಿಂದ ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ, ಅವರನ್ನು ಉತ್ಕೃಷ್ಟ ಸ್ವಭಾವ, ದಯೆ, ನೀತಿ ಮತ್ತು ಸತ್ಯದ ಮಾರ್ಗಕ್ಕೆ ಕೊಂಡೊಯ್ಯಲು ನಾನು ಆಜ್ಞಾಪಿಸಲ್ಪಟ್ಟಿರುವೆನು. ಲೋಕದಲ್ಲಿ ಯಾರೂ ನನ್ನ ಶತ್ರುವಲ್ಲವೆಂಬ ಸಂಗತಿಯನ್ನು ಮುಸ್ಲಿಮರೂ ಕ್ರೈಸ್ತರೂ ಹಿಂದುಗಳೂ ತಿಳಿದುಕೊಳ್ಳಲಿ. ಕರುಣಾಳುವಾದ ಒಬ್ಬ ಪಿತ ತನ್ನ ಸಂತಾನಗಳನ್ನು ಪ್ರೀತಿಸುವ ರೀತಿಯಲ್ಲಿ, ಅಲ್ಲ, ಅದಕ್ಕಿಂತ ಮಿಗಿಲಾಗಿ ಮನುಷ್ಯ ಸಮುದಾಯವನ್ನು ನಾನು ಪ್ರೀತಿಸುತ್ತೇನೆ." (ಅರ್‌ಬಈನ್)

ತನ್ನ ಅನುಯಾಯಿಗಳಿಗೆ ತಾಕೀತು ಮಾಡುತ್ತಾ ಅವರು ಹೀಗೆ ಉಪದೇಶಿಸಿದರು: "ನನ್ನನ್ನು ವಾಗ್ದತ್ತ ಮಸೀಹ್ ಎಂದು ವಿಶ್ವಾಸವಿರಿಸಿದ ನನ್ನ ಜಮಾಅತಿನ ಜನರೊಡನೆ ಮುಖ್ಯವಾಗಿ ನಾನು ಉಪದೇಶಿಸುತ್ತೇನೆ. ಅವರು ಅಂತಹ ಅಪರಿಶುದ್ಧ ಸಂಪ್ರದಾಯಗಳಿಂದೆಲ್ಲಾ ಸದಾ ದೂರವಿದ್ದುಕೊಳ್ಳಬೇಕು. ದೇವನು ನನ್ನನ್ನು ವಾಗ್ದತ್ತ ಮಸೀಹಾಗಿ ನಿಯೋಗಿಸಿರುವನು; ಮರ್‌ಯಮರ ಪುತ್ರನಾದ ಮಸೀಹರ ವಸ್ತ್ರವನ್ನು ನನಗೆ ಉಡಿಸಿರುವನು. ಎಲ್ಲಾ ವಿಧ ಉಪದ್ರವ ಪ್ರವರ್ತನೆಗಳಿಂದ ನೀವು ದೂರವಿದ್ದು ಕೊಳ್ಳಿರಿ. ಮನುಷ್ಯ ವಂಶದೊಡನೆ ಕರುಣೆಯಿಂದಲೂ ಪ್ರೀತಿಯಿಂದಲೂ ವರ್ತಿಸಿರಿ. ಹಗೆ ಮತ್ತು ದ್ವೇಷದಿಂದ ನೀವು ನಿಮ್ಮ ಹೃದಯವನ್ನು ಶುದ್ಧೀಕರಿಸಿರಿ. ಆಗ ನೀವು ದೇವಚರರಂತೆ (ಮಲಾಯಿಕ್) ಆಗುವಿರಿ. ಮನುಷ್ಯವರ್ಗದೊಡನೆ ದಯೆ ಮತ್ತು ಕರುಣೆಯನ್ನು ತೋರಿಸಲು ಕಲಿಸದ ಮತ ಭೀಭತ್ಸವೂ ಮಲಿನವೂ ಆಗಿದೆ. ಹಗೆ ಮತ್ತು ದ್ವೇಷದ ಮುಳ್ಳುಗಳಿಂದ ತುಂಬಿದ ಮಾರ್ಗ ಎಷ್ಟು ಅಪರಿಶುದ್ಧ. ನನ್ನೊಡನೆ ಸಂಬಂಧವಿರಿಸಿಕೊಂಡಿರುವವರು ಅಂತಹವರು ಆಗಿರಬಾರದು. ಮತದಿಂದ ನಿಮಗೆ ಏನು ಗಳಿಕೆಯುಂಟಾಯಿತೆಂದು ನೀವು ಆಲೋಚಿಸಿ ನೋಡಿರಿ. ಜನರನ್ನು ಸದಾ ಪೀಡಿಸುತ್ತಾ ಇರುವುದೋ ನಿಮಗೆ ಅದರಿಂದ ಲಭಿಸಿದ ಗಳಿಕೆ ? ದೇವನಿಂದ ಸ್ವೀಕೃತವಾಗುವಂತಹ ಜೀವನ ಮಾರ್ಗವನ್ನು ಮತ ಕಲಿಸುತ್ತದೆ. ದೇವನ ಸ್ವಭಾವವನ್ನು ಮನುಷ್ಯನು ತನ್ನಲ್ಲಿ ಅಳವಡಿಸದೆ ಅಂತಹ ಜೀವತವು ಯಾವಾಗಲೂ ಪ್ರಾಪ್ತವಾಗದು; ಪ್ರಾಪ್ತಿಯಾಗಿಯೂ ಇಲ್ಲ ಆದ್ದರಿಂದ ದೇವನಿಗಾಗಿ ನೀವು ಎಲ್ಲರೊಡನೆ ಕರುಣೆದೋರಿಸಿರಿ. ಎಲ್ಲಾ ಪ್ರಕಾಶವನ್ನೂ ಕಾಂತಿಹೀನಗೊಳಿಸುವ ಒಂದು ಮಹತ್ತಾದ ಪ್ರಕಾಶದ ಕುರಿತು ನಾನು ನಿಮಗೆ ಹೇಳಿಕೊಡುವೆನು. ಅದು, ಸರ್ವವಿಧ ಹಗೆ ಮತ್ತು ವಿದ್ವೇಷವನ್ನು ವರ್ಜಿಸಿ ಮನುಷ್ಯ ಸಮುದಾಯದ ಹಿತಕಾಂಕ್ಷಿಯಾಗಿ ವರ್ತಿಸುವುದೂ ದೇವನಲ್ಲಿ ಲೀನವಾಗಿ ಅವನಿಂದ ಪರಿಶುದ್ಧತೆಯನ್ನು ಕರಗತ ಮಾಡುವುದೂ ಆಗಿದೆ". (ಇಸ್ಲಾಂ ವ ಜಿಹಾದ್)

ಮೇಲೆ ವಿವರಿಸಿದ್ದು ಇಸ್ಲಾಮಿನ ಸ್ನೇಹ ನಿರ್ಭರವಾದ ಸಂದೇಶದ ಸತ್ವವಾಗಿದೆ. ಮನುಷ್ಯರು, ಅವರು ಯಾವ ದೇಶದವರಾಗಿದ್ದರೂ ಯಾವ ವರ್ಗದವರಾಗಿದ್ದರೂ ಯಾವ ವರ್ಣದವರಾಗಿದ್ದರೂ ಯಾವ ಭಾಷೆ ಮಾತಾಡುವವರಾಗಿದ್ದರೂ ಒಬ್ಬನೇ ಒಬ್ಬ ದೇವನ ಸೃಷ್ಟಿಗಳಾಗಿದ್ದಾರೆ. "ಅಲ್ಲಾಹ್" ಎಂಬ ನಾಮದಿಂದ ನಾವು ಕರೆಯುವ ದೇವನು ಎಲ್ಲಾ ಮನುಷ್ಯರಾಶಿಯ ದೇವನಾಗಿದ್ದಾನೆ; ಮತ–ವರ್ಗ–ದೇಶ ವ್ಯತ್ಯಾಸವಿಲ್ಲದೆ ಕರುಣೆ ತೋರುವವನಾಗಿದ್ದಾನೆ. ಮನುಷ್ಯರೆಲ್ಲಾ ಅವನ ದೃಷ್ಟಿಯಲ್ಲಿ ಸಮಾನರೂ ಸಹೋದರರೂ ಆಗಿದ್ದಾರೆ. ಅವನು ಅಪಾರವಾಗಿ ಕರುಣೆಯನ್ನೂ ವಾತ್ಸಲ್ಯವನ್ನೂ ತೋರಿಸುವವನಾಗಿದ್ದಾನೆ. ಅವನು ಸೀಮಾತೀತವಾದ ಸಾಮರ್ಥ್ಯಗಳ ಒಡೆಯನಾಗಿದ್ದಾನೆ. ಅವನಿಗೆ ಶರಣಾಗಿ ಅವನೊಡನೆ ಯಾಚಿಸುವವರಿಗೆ ಅವನು ಬಹಳವಾಗಿ ಅನುಗ್ರಹಿಸುತ್ತಾನೆ.

ಇಂದು ಮನುಷ್ಯನು ಸಾರ್ವಲೌಕಿಕ ಹಾಗೂ ಭಯಂಕರವಾದ ನಾಶದ ಅಂಚಿನಲ್ಲಿ ನಿಂತಿದ್ದಾನೆ. ಅದರಿಂದ ಪಾರಾಗಲಿಕ್ಕಾಗಿ ಮನುಷ್ಯನು ಪಡುವ ಶ್ರಮವೆಲ್ಲಾ ವಿಫಲಗೊಳ್ಳುತ್ತಿದೆ. ಆದರೆ ಈ ನಾಶದಿಂದ ಬಚಾವಾಗಲಿಕ್ಕೆ ಒಂದು ಕವಾಟ ಇಂದಿಗೂ ತೆರೆದಿರಿಸಲ್ಪಟ್ಟಿದೆ. ಅದೇನೆಂದರೆ, ಮನುಷ್ಯನು ತನ್ನ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಆಗಿರುವ ದೇವನೆಡೆಗೆ ತಿರುಗುವುದಾಗಿದೆ; ಅವನ ಸಂದೇಶವನ್ನು ಸ್ವೀಕರಿಸಿಕೊಂಡು ಅವನ ಕರುಣೆಗೆ ಪಾತ್ರವಾಗುವುದಾಗಿದೆ. ನಾವಿಂದು ಇಲ್ಲಿ ಒಟ್ಟುಗೂಡಿರುವುದು ಏಕನೂ ಸರ್ವೋನ್ನತನೂ ಆದ ದೇವನೊಡನೆ ಪ್ರಾರ್ಥಿಸುತ್ತಾ ಅವನ ಸಹಾಯವನ್ನು ಬೇಡುತ್ತಾ ಅವನ ಈ ಭವನವನ್ನು ಜನನಿಬಿಡಗೊಳಿಸಲಿಕ್ಕಾಗಿದೆ.

ಏಕನೂ ಸರ್ವೋನ್ನತನೂ ಆದ ದೇವನಲ್ಲಿ ನಂಬಿಕೆಯಿರಿಸಿ ಅವನಿಗೆ ಶರಣಾಗಿ ಅವನನ್ನು ಆರಾಧಿಸುವ ಎಲ್ಲರಿಗೂ ಈ ದೇವ ಮಂದಿರದ ಬಾಗಿಲು ತೆರೆದಿರಿಸಲ್ಪಡುವುದು. ಈ ಮಸೀದಿ ಸ್ಪಾನಿಷ್ ಜನತೆಗೂ ಯುರೋಪಿಗೂ ಮಾತ್ರವಲ್ಲ, ಇಡೀ ಲೋಕಕ್ಕೂ ಅನುಗ್ರಹ ಮತ್ತು ಸಮಾಧಾನಕ್ಕೆ ಕಾರಣವಾಗಲೆಂದು ನಾವು ಪ್ರಾರ್ಥಿಸುತ್ತೇವೆ. ಅಹ್ಮದಿಯಾ ಜಮಾಅತಿನ ಈ ಸೇವೆಯನ್ನು ಅಲ್ಲಾಹನು ಅವನ ಔದಾರ್ಯದಿಂದ ಸ್ವೀಕರಿಸುವಂತಾಗಲಿ.

ಈ ಸಂದರ್ಭದಲ್ಲಿ, ಈ ಮಸೀದಿಯ ನಿರ್ಮಾಣ ಕಾರ್ಯದಲ್ಲಿ ವಿವಿಧ ರೀತಿಯಲ್ಲಿ ನಮಗೆ ನೆರವಿತ್ತ ಎಲ್ಲರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ವಿಶಿಷ್ಟವಾಗಿ, ಈ ನಗರದ ಮೇಲಾಧಿಕಾರಿಗಳಿಗೂ ಸ್ಪೇಯಿನಿನ ಆಡಳಿತೆಗಾರರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಅವರು ಮತ ಪರವಾದ ವ್ಯತ್ಯಾಸವಿದ್ದರೂ ಮಸೀದಿಗೆ ಸ್ಥಳವನ್ನು ನೀಡುವ ವಿಷಯದಲ್ಲೂ ಮಸೀದಿ ನಿರ್ಮಾಣಕ್ಕೆ ಅನುಮತಿ ನೀಡುವ ಸಂಬಂಧಿಸಿಯೂ ನಮಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡಿ ಮತ ಸೌಹಾರ್ದದ ವಿಶಾಲವಾದೊಂದು ಕವಾಟವನ್ನು ತೆರೆದುಕೊಟ್ಟಿರುವರು. ಅಲ್ಲಾಹನು ಅವರನ್ನೆಲ್ಲಾ ಅನುಗ್ರಹಿಸಲಿ. ಹಾಗೆಯೇ ನಾನಾ ವಿಧದಲ್ಲಿ ನಮಗೆ ಸಹಾಯ ಸಹಕಾರಗಳನ್ನಿತ್ತ ಸರ್ವರಿಗೂ ನಾನು ಧನ್ಯವಾದ ಅರ್ಪಿಸುತ್ತೇನೆ. ಅಲ್ಲಾಹನು ಅವರೆಲ್ಲರನ್ನೂ ಅನುಗ್ರಹಿಸಲಿ.

ಈ ಬಗ್ಗೆ ಹೆಚ್ಚು ಹೇಳುವುದಕ್ಕಿಂತ ಮುಂಚೆ ಒಂದು ಸಂಗತಿಯನ್ನು ಹೇಳುವ ಆಗತ್ಯವಿದೆ. ಸಂತೋಷದಲ್ಲೂ ಸ್ತುತಿಕೀರ್ತನೆಯಲ್ಲೂ ಮಗ್ನರಾಗಿರುವ ಈ ಸನ್ನಿವೇಶದಲ್ಲಿ ಗಾಢವಾದೊಂದು ದುಃಖ ಸ್ಮೃತಿಪಟಲದಲ್ಲಿ ಉಕ್ಕಿ ಬರುತ್ತಿದೆ. ಈ ದುಃಖ ನನಗೆ ಮಾತ್ರವಿರುವುದಲ್ಲ; ಅದರಲ್ಲಿ ನನ್ನೊಂದಿಗೆ ಲೋಕಾದ್ಯಂತವುಳ್ಳ ಮಿಲಿಯಗಟ್ಟಲೆ ಅಹ್ಮದೀಯರೂ ಸಹಭಾಗಿಗಳಾಗಿದ್ದಾರೆ. ನನ್ನೊಂದಿಗೆ ಅವರು ಸಹ ದುಃಖ ಪಡುತ್ತಾರೆ. ಮಾತ್ರವಲ್ಲ, ಈ ಮಸೀದಿಯ ಶಿಲಾನ್ಯಾಸ ಸಂದರ್ಭದಲ್ಲಿ ಸೇರಿದ್ದ ಸ್ಪಾನಿಷರಾದ ಈ ಊರಿನ ಎಲ್ಲರೂ ನನ್ನೊಡನೆ ವೇದನೆ ಪಡುತ್ತಾರೆ. ನನ್ನ ಪೂರ್ವಾಧಿಕಾರಿಯಾಗಿದ್ದ ಸರ್ವಪ್ರೀತಿಯ ಇಮಾಂ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ಅವರ ಕುರಿತ ಸ್ಮರಣೆಯಾಗಿದೆ ಅದು. ಅವರ ಕುರಿತ ಮಧುರ ಸ್ಮರಣೆ ಅವರೊಡನೆ ಸಂಪರ್ಕವಿದ್ದ ಎಲ್ಲರಿಗೂ ಉಂಟಾಗುತ್ತದೆ. ಆದರೆ ಯಾವ ಉನ್ನತನೂ ಪರಿಶುದ್ಧನೂ ಆದ ನಮ್ಮ ಒಡೆಯನಾದ ಅಲ್ಲಾಹನ ಹೆಸರಿನಲ್ಲಿ ಈ ಮಸೀದಿ ನಿರ್ಮಿಸಲ್ಪಟ್ಟಿದೆಯೋ, ಅವನು ಇತರ ಎಲ್ಲರಿಗಿಂತಲೂ ಹೆಚ್ಚು ಪ್ರೀತಿಯವನು. ನಮ್ಮನ್ನು ಅಗಲುವ ಹಲವರನ್ನು ನಾವು ಬಹಳ ಹೆಚ್ಚು ಪ್ರೀತಿಸುವುದಾದರೂ ಕರೆಯುವವನು ಅದಕ್ಕಿಂತಲೂ ಮಿಗಿಲಾಗಿ ಪ್ರೀತಿಸಲ್ಪಡುವವನಾಗಿದ್ದಾನೆ. ಆದ್ದರಿಂದ ಕರೆಯುವ ಅಲ್ಲಾಹನ ತೃಪ್ತಿಯಲ್ಲಿ ನಾವು ಸಹ ತೃಪ್ತಿ

ಪಡುತ್ತೇವೆ. ಅವನ ತೃಪ್ತಿಯು ಮುಂದೆ ನಾವು ನಮ್ಮ ಶಿರಬಾಗುತ್ತೇವೆ. ಎಲ್ಲರಿಗಿಂತ ಅವನು ನಮಗೆ ಅತ್ಯಂತ ಪ್ರೀತಿಯವನು. ಅವನ ದಾಸರನ್ನು ಅತ್ಯಧಿಕ ಸ್ನೇಹಿಸುವವನೂ ಅವನೇ. ಅವನ ಕಾರುಣ್ಯಕ್ಕೂ ವಾತ್ಸಲ್ಯಕ್ಕೂ ಸೀಮೆಯಾಗಲಿ ಮಿತಿಯಾಗಲಿ ಇಲ್ಲ, ಅದು ಸದಾ ಶಾಶ್ವತವಾದುದು. ಅವನ ಅನುಗ್ರಹವೆಂಬ ಚಿಲುಮೆಯಿಂದ ಹರಿದು ಬರುವ ಎಲ್ಲಾ ಮತಗಳೂ ದಿಟವಾಗಿಯೂ ಈ ದಯಾವಾತ್ಸಲ್ಯದ ಅಧ್ಯಾಪನವನ್ನೇ ಮನುಷ್ಯನಿಗೆ ಕಲಿಸುತ್ತದೆ. ಮನುಷ್ಯ ಸಮುದಾಯಕ್ಕೆ ಸ್ನೇಹ ಮತ್ತು ಸೌಹಾರ್ದದ ಸಂದೇಶ ವಿನಾ ಬೇರೇನನ್ನೂ ದೈವಿಕ ಮತಗಳು ಬೋಧಿಸುವುದಿಲ್ಲವೆಂಬುದು ಒಂದು ಯಥಾರ್ಥ್ಯ.

ಈ ಅಚಲ ಮೂಲತತ್ವದ ವಿರುದ್ಧವಾಗಿ, ಯಾವ ಮತವಾದರೂ ದೈವಿಕ ಮತವೆಂದು ವಾದಿಸುತ್ತಾ ಅನೈಕ್ಯ, ಹಗೆ ಮತ್ತು ದ್ವೇಷದ ಉಪದೇಶ ನೀಡುವುದಾದರೆ, ಆ ಮತ ಖಂಡಿತವಾಗಿಯೂ ಸುಳ್ಳು ಮತವಾಗಿದೆ. ಅದು ದೈವಿಕ ಮತವಾಗಲಿಕ್ಕೆ ನಿರ್ವಾಹವಿಲ್ಲ. ಸ್ನೇಹದ ಹೃದಯದಿಂದ ವಿದ್ವೇಷದ ಚಿಲುಮೆ ಹರಿಯಲಾರದು; ಮಾತೃಸ್ತನದಿಂದ ಹಾಲಲ್ಲದೆ ವಿಷಸುರಿಯಲಾರದು. ಇಸ್ಲಾಂ ಧರ್ಮದ ಸತ್ಯತೆಯ ಪುರಾವೆ ಅದರ ಅಧ್ಯಾಪನದಲ್ಲೇ ಕಾಣಬಹುದಾಗಿದೆ. ಶಾಂತಿ, ಸೌಹಾರ್ದ, ಸ್ನೇಹ ಮತ್ತು ದಯೆಯ ಪಾಠವನ್ನು ಅದು ಕಲಿಸುತ್ತದೆ.

ಕೊನೆಯದಾಗಿ ಒಂದು ವಿಷಯವನ್ನು ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ಸ್ಪಾನಿಷ್ ಜನತೆಯ ಕುರಿತು ಸದ್ಭಾವನೆ ವಿನಾ ಬೇರೇನೂ ನಮ್ಮ ಹೃದಯದಲ್ಲಿಲ್ಲ. ಏಕನಾದ ದೇವನೆಡೆಗೆ ಅವರನ್ನು ಆಹ್ವಾನಿಸಲಿಕ್ಕೂ ಅವನನ್ನು ಆರಾಧಿಸಲಿಕ್ಕೂ ನಿಷ್ಕಳಂಕ ಹೃದಯದಿಂದ ನಾವಿಂದು ಈ ಮಸೀದಿಯ ಉದ್ಘಾಟನೆ ಮಾಡಲು ಸೇರಿರುತ್ತೇವೆ. ಲೋಕದ ಎಲ್ಲಾ ಸಮಸ್ಯೆಗಳಿಗಿರುವ ಪರಿಹಾರ ಒಂದು ಮಾತ್ರವೆಂದು ನಾವು ನಂಬುತ್ತೇವೆ. ಅದು, ಜನರು ತಮ್ಮ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಆದ ಏಕದೇವನ ಕಡೆಗೆ ಮರಳಬೇಕೆಂಬುದು. ಮನುಷ್ಯಕುಲವನ್ನಿಡೀ ಪ್ರೀತಿಯೆಂಬ ಹಗ್ಗದಿಂದ ಬಂಧಿಸಲು ಇದರ ವಿನಾ ಬೇರೆ ಯಾವ ಉಪಾಯವೂ ಇಲ್ಲ. ಒಬ್ಬಳೇ ತಾಯಿಯ ಮಕ್ಕಳೆಡೆಯಲ್ಲಿ ಗೋಚರಿಸಲ್ಪಡುವ ಸ್ವಾಭಾವಿಕ ಸ್ನೇಹ ಭಾವವು ಒಬ್ಬನೇ ಸೃಷ್ಟಿಕರ್ತನ ಸೃಷ್ಟಿಗಳು ಮನುಷ್ಯರೆಲ್ಲಾ ಎಂಬ ಭಾವನೆಯಿಂದ ಮಾತ್ರವೇ ಉಂಟಾದೀತು. ಈ ಒಂದು ಭಾವನೆಯಿಂದ ಒಂದುಗೂಡುವುದರಿಂದ ಮಾತ್ರವೇ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದಲ್ಲೆಲ್ಲಾ ವಾಸಿಸುವ ಮನುಷ್ಯರೆಡೆಯಲ್ಲಿ ಯಥಾರ್ಥ ಸ್ನೇಹಬಾಂಧವ್ಯ ಉಂಟಾಗುವುದು. ಅಂತಹ ಒಂದು ಸ್ನೇಹ ಬಾಂಧವ್ಯಕ್ಕಾಗಿ, ಮರುಭೂಮಿಯಲ್ಲಿ ದಾಹದಿಂದ ನೀರಿಗಾಗಿ ಚಡಪಡಿಸುತ್ತಿರುವ ಒಂದು ಶಿಶುವಿನಂತೆ ಮನುಷ್ಯಕುಲ ಇಂದು ತಹತಹಿಸುತ್ತಿದೆ.

ಆದ್ದರಿಂದ, ಯಾವ ದೇವನ ಕೈಯಲ್ಲಿ ನಮ್ಮ ಜೀವ ಇದೆಯೋ, ಹೃದಯಗಳ ಒಳಗಿರುವ ಎಲ್ಲಾ ವಿಚಾರಗಳನ್ನು ಚೆನ್ನಾಗಿ ತಿಳಿಯುವವನು ಯಾವ ದೇವನೋ, ಅವನ ಹೆಸರಿನಲ್ಲಿ ಸತ್ಯಪ್ರಮಾಣ ಮಾಡುತ್ತಾ ನಾನು ನನ್ನ ಜಮಾಅತಿನ ಪರವಾಗಿಯೂ ನನ್ನ ಪರವಾಗಿಯೂ ಸಾರುತ್ತೇನೆ: ಏಕನಾದ ಅಲ್ಲಾಹನೊಡನಿರುವ ಪ್ರೀತಿಯೂ ಮನುಷ್ಯ ವರ್ಗದೊಡನಿರುವ ನಿಷ್ಕಳಂಕವಾದ ಸ್ನೇಹವೂ ಹೊರತು ಬೇರೆ ಯಾವ ಸಂದೇಶವನ್ನೂ ಸ್ಪಾನಿಷ್ ಜನತೆಗಾಗಿ ನಾವು ತಂದಿಲ್ಲ.

ಜಗತ್ತಿನಲ್ಲಿ ಕೆಲವು ಜನತೆಗಳನ್ನು ಸ್ನೇಹದ ಹೊರತಾಗಿಯೂ ಗೆಲ್ಲಲು ಸಾಧ್ಯವಿದೆ. ಹಾಗೆ ಸಂಭವಿಸುತ್ತಲೂ ಇದೆ. ಆದರೆ ಸ್ಪಾನಿಷ್ ಜನರು ಅಂತಹವರಲ್ಲ. ಸ್ಪಾನಿಷ್ ಜನರ ಸಂಬಂಧಿಸಿ ಚರಿತ್ರೆ ನನಗೆ ಮನಗಾಣಿಸಿಕೊಟ್ಟಿರುವುದೇನೆಂದರೆ, ಈ ಸಮುದಾಯವನ್ನು ಸ್ನೇಹ ಮೂಲಕವಲ್ಲದೆ ಬೇರೆ ಯಾವ ಆಯುಧದಿಂದಾಗಲಿ ಬೇರೆ ಯಾವ ವಿಧದಲ್ಲಾಗಲಿ ಗೆಲ್ಲಲು ಸಾಧ್ಯವಿಲ್ಲ..........

ನನ್ನ ದೇವ ನನಗೆ ನೀಡಿರುವ ಅಂತರ್ದೃಷ್ಟಿ ಮತ್ತು ಮಾರ್ಗದರ್ಶನದ ಆಧಾರದಿಂದ ನಾನು ನಂಬುವುದೇನೆಂದರೆ, ಸ್ನೇಹ ಸೌಹಾರ್ದ ಮತ್ತು ನಿಷ್ಕಳಂಕ ಸೇವೆಯ ಮೂಲಕ ಮಾತ್ರ ಸ್ಪಾನಿಷ್ ಜನತೆಯನ್ನು ಜಯಿಸಬಹುದೆಂದು ದೇವನು ನಿಶ್ಚಯಿಸಿದ್ದಾನೆ. ಈ ವಿಧಿಯನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ಪಾನಿಷ್ ಜನತೆಗೆ ಇನ್ನೂ ಒಂದು ವಿಷಯವನ್ನು ತಿಳಿಸಲು ನಾನು ಇಚ್ಛಿಸುತ್ತೇನೆ. ಅದೇನೆಂದರೆ, ಸ್ನೇಹವೆಂಬ ಆಯುಧ ಎರಡು ಬದಿ ಹರಿತವುಳ್ಳ ಖಡ್ಗವಾಗಿದೆ. ಏಕಕಾಲದಲ್ಲಿ ಅದು ಸೋತವನ ಹೃದಯದಲ್ಲಾಗುವಂತೆ ಗೆದ್ದವನ ಹೃದಯದಲ್ಲೂ ಗಾಯವನ್ನುಂಟು ಮಾಡಿ ಸೋತವ-ಗೆದ್ದವರ ಮಧ್ಯೆ ಇರುವ ವ್ಯತ್ಯಾಸವನ್ನು ನಿವಾರಿಸುತ್ತದೆ. ಈರ್ವರನ್ನೂ ಅದು ಸ್ನೇಹ ಪಾಶದಲ್ಲಿ ಬಂಧಿಸುತ್ತದೆ.

# ಈಸಾನಬಿ ( ಪವಾದಿ ಯೇಸು ) ವಿವಾಹಿತರಲ್ಲವೇ ?

★ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ H. A.

ಈಸಾನಬಿ (ಪ್ರವಾದಿ ಯೇಸು) ದೇವನೆಂದೂ ಅವರು ಮನುಷ್ಯರ ಪಾಪ ಪರಿಹಾರಕ್ಕಾಗಿ ಶಿಲುಬೆಯ ಮೇಲೆ ಮಡಿದು ಮೂರನೆಯ ದಿವಸ ಎದ್ದು ಆಕಾಶಕ್ಕೇರಿ ಹೋದರೆಂದೂ ಕ್ರೈಸ್ತರು ನಂಬುವ ರೀತಿಯಲ್ಲಿ ಮುಸ್ಲಿಮರು ನಂಬುವುದಿಲ್ಲ. ವೈರಿಗಳಾದ ಯಹೂದರು ಈಸಾನಬಿಯನ್ನು ಅವರ 33ನೇ ವಯಸ್ಸಿನಲ್ಲಿ ಶಿಲುಬೆಗೇರಿಸಲಿಕ್ಕಾಗಿ ಹಿಡಿಯಲು ಸುತ್ತುವರಿದಾಗ ಅಲ್ಲಾಹನು ಅವರನ್ನು ಆಕಾಶಕ್ಕೆತ್ತಿ ರಕ್ಷಿಸಿದನೆಂದೂ ಬದಲಿಗೆ ಶತ್ರುಗಳ ಪೈಕಿ ಒಬ್ಬನನ್ನು ಈಸಾನಬಿಯ ಆಕೃತಿಯಲ್ಲಿ ಅಲ್ಲಾಹನು ರೂಪಾಂತರಪಡಿಸಿದನುಸಾರ ಅವನನ್ನು ಯಹೂದರು ಈಸಾನಬಿಯೆಂದು ಭಾವಿಸಿ ಕೊಂದರೆಂದೂ ಈ ಕಾಲದ ಬಹುಸಂಖ್ಯಾತ ಮುಸ್ಲಿಮರ ನಂಬುಗೆಯಾಗಿದೆ. ಹೀಗೆ ಕ್ರೈಸ್ತ ಮತ್ತು ಮುಸ್ಲಿಮರ ನಂಬಿಕೆಗಳಲ್ಲಿ ವ್ಯತ್ಯಾಸವಿದ್ದರೂ ಈಸಾನಬಿ 33ನೇ ವಯಸ್ಸಿನಲ್ಲಿ ಆಕಾಶಕ್ಕೆತ್ತಲ್ಪಟ್ಟರೆಂಬ ನಂಬಿಕೆಯ ಸಂಬಂಧಿಸಿ ಉಭಯ ಪಕ್ಷದವರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಆದ್ದರಿಂದ, ಈಸಾನಬಿ ತನ್ನ 33ನೇ ಪ್ರಾಯದ ವರೆಗಿನ ಜೀವಿತದಲ್ಲಿ ವಿವಾಹವಾಗಲಿಲ್ಲವೆಂಬ ಕ್ರೈಸ್ತರ ನಂಬಿಕೆಯನ್ನು ಅವಲಂಬಿಸಿ ಮುಸ್ಲಿಮರು ಸಹ ಸಾಮಾನ್ಯವಾಗಿ, ಆ ಮಹಾತ್ಮ ವಿವಾಹವಾಗಿರಲಿಲ್ಲವೆಂದು ನಂಬುತ್ತಾರೆ. ಅವರ ವಿಶ್ವಾಸ ಈ ಪ್ರಕಾರವಾಗಿದ್ದರೂ ಅದಕ್ಕೆ ಪವಿತ್ರ ಖುರ್‌ಆನಿನಿಂದಾಗಲಿ ಹದೀಸಿನಿಂದಾಗಲಿ ಅವರಿಗೆ ಯಾವ ಪುರಾವೆಯೂ ದೊರೆಯಲಾರದು. ಪ್ರವಾದಿಗಳ ಕುರಿತು ಸಾಮಾನ್ಯವಾಗಿ ಹಲವಾರು ಅಸಂಬದ್ಧ ವೃತ್ತಾಂತಗಳು ಖುರ್‌ಆನಿನ ಭಾಷ್ಯ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟು ಅವು ಮುಸ್ಲಿಮರ ನಂಬಿಕೆಯೆಂಬಂತೆ ಪ್ರಚಾರಗೊಳ್ಳಲಿಕ್ಕೆ ಕಾರಣ ಪ್ರವಾದಿಗಳ ಕುರಿತು ಯಹೂದ ಮತ್ತು ಕ್ರೈಸ್ತರೆಡೆಯಲ್ಲಿ ಪ್ರಚಲಿತವೂ ಬೈಬಲಿನಲ್ಲಿ ವಿವರಿಸಲ್ಪಟ್ಟವೂ ಆದ ಕಥೆಗಳನ್ನು ಪೂರ್ವಿಕ ಮುಸ್ಲಿಂ ಪಂಡಿತರು ಸತ್ಯ ವೃತ್ತಾಂತಗಳೆಂದು ಭಾವಿಸಿದುದಾಗಿದೆ. ಇದೇ ಪ್ರಕಾರವೇ ಈಸಾನಬಿಯ ಸಂಬಂಧಿಸಿ ಆಧಾರ ರಹಿತ ಹಲವು ಕ್ರೈಸ್ತ ನಂಬಿಕೆಗಳು ಮುಸ್ಲಿಮರೆಡೆಯಲ್ಲಿ ನುಸುಳಿವೆ. ವಾಸ್ತವದಲ್ಲಿ ಅಂತಹ ನಂಬಿಕೆಗಳಲ್ಲಿ ಬಹುಪಾಲು ನಿರಾಧಾರವೂ ಪ್ರವಾದಿಗಳ ಸ್ಥಾನ ಮಹಿಮೆಗೆ ಸರಿಹೊಂದಿಕೆಯಿಲ್ಲದವೂ ಆಗಿವೆ. ಸ್ಥಳಾಭಾವದಿಂದ ಅಂತಹ ಸಂಗತಿಗಳನ್ನು ಇಲ್ಲಿ ವಿವರಿಸುವುದಿಲ್ಲ

ಈಸಾನಬಿ 33ನೇ ವಯಸ್ಸಿನಲ್ಲಿ ಆಕಾಶಕ್ಕೆತ್ತಲ್ಪಟ್ಟರು; ಅಷ್ಟರ ವರೆಗಿನ ತನ್ನ ಜೀವತದಲ್ಲಿ ಅವರು ವಿವಾಹವಾಗಿರಲಿಲ್ಲವೆಂದಲ್ಲವೇ ಸಾಮಾನ್ಯ ವಿಶ್ವಾಸ. ಆದರೆ ಅವರು ಹಾಗೆ 33ನೇ ಪ್ರಾಯದಲ್ಲಿ ಆಕಾಶಕ್ಕೆತ್ತಲ್ಪಡಲಿಲ್ಲವೆಂದೂ ಆ ಬಳಿಕ ಸಹ ದೀರ್ಘಕಾಲದವರೆಗೆ ಅವರು ಬದುಕಿ ತನ್ನ ದೌತ್ಯವನ್ನು ಪ್ರಬೋಧಿಸುತ್ತಿದ್ದರೆಂದೂ ವಿವಾಹ ಮಾಡಿಕೊಳ್ಳುವರೆ ಅವರಿಗೆ ಯಾವುದೇ ಪ್ರತಿಬಂಧ ಇರಲಿಲ್ಲವೆಂದೂ ರುಜುಗೊಳ್ಳುವುದಾದರೆ ಅವರು ತನ್ನ ಆ ದೀರ್ಘ ಜೀವಿತ ಕಾಲದಲ್ಲಿ ವಿವಾಹ ಮಾಡಿಕೊಂಡಿರಬೇಕೆಂದು ಹೇಳುವುದು ಸಹ ಅಸಂಗತವಾಗಲಾರದು; ಅವರು ವಿವಾಹವಾಗಲಿಲ್ಲವೆಂದು ಹೇಳುವುದು ಆಧಾರರಹಿತವೆಂದು

---

(11ನೇ ಪುಟದಿಂದ)

ಅದ್ಭುತಕರವಾದೊಂದು ಲೋಕ ಇಲ್ಲಿ ಜನ್ಮತಾಳುತ್ತದೆ. ವಿಜಯಿ ಪರಾಜಿತನಾಗುತ್ತಾನೆ: ಪರಾಜಿತನು ವಿಜಯಿಯಾಗುತ್ತಾನೆ. ನೋಡಿರಿ, ಪ್ರಣಯಿಗಳು ಒಬ್ಬರನ್ನೊಬ್ಬರು ಗೆದ್ದರೆ ಪ್ರತಿಕಾರಕ್ಕೆ ಉದ್ಯುಕ್ತರಾಗಲಿಕ್ಕಿಲ್ಲವಷ್ಟೆ. ಬದಲಾಗಿ, ಹೆಚ್ಚು ಪ್ರೀತಿಯನ್ನು ತೋರಿಸುವರು. ಅದನ್ನೇ ನಮಗೆ ಇಲ್ಲಿ ಸಹ ಕಾಣಲು ಸಾಧ್ಯ.

ನಾನು ನನ್ನ ಮಾತನ್ನು ಇಷ್ಟು ಹೇಳಿ ಕೊನೆಗೊಳಿಸುತ್ತೇನೆ: ಓ ಅಲ್ಲಾಹ್, ಮಾನವ ಕುಲವನ್ನೆಲ್ಲಾ ಮೇಲೆ ಹೇಳಿದ ರೀತಿಯಲ್ಲಿ ಪ್ರೀತಿಸುವ ಸೌಭಾಗ್ಯವನ್ನು ನಮಗೆ ನೀಡು. ಅನ್ಯೋನ್ಯ ಪ್ರೀತಿಸುವ ಹೃದಯವನ್ನು ಮನುಷ್ಯ ವರ್ಗಕ್ಕೆ ನೀನು ನೀಡು. ●

ಯಾರಿಗೂ ಮನದಟ್ಟಾಗ ಬಹುದು. ಆ ಮಹಾತ್ಮ 33ನೇ ವಯಸ್ಸಿನಲ್ಲಿ ಸ್ವಶರೀರದೊಂದಿಗೆ ಆಕಾಶಕ್ಕೆ ಎತ್ತಲ್ಪಡಲಿಲ್ಲ, ಇತರ ಪ್ರವಾದಿಗಳಂತೆಯೇ ದಿವ್ಯದೌತ್ಯ ನಿರ್ವಹಿಸಿದ ಬಳಿಕ ಈ ಭೂಮಿಯಲ್ಲೇ ಮೃತಿ ಹೊಂದಿದರೆಂದು ಪವಿತ್ರ ಖುರ್‌ಆನಿನಿಂದಲೂ ತಿಳಿದು ಬರುತ್ತದೆ. ಅವರು ಎಷ್ಟು ವರ್ಷ ಬದುಕಿದ್ದರೆಂದು ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿಸಲ್ಪಟ್ಟಿಲ್ಲವಾದರೂ 120ನೇ ವಯಸ್ಸಿನ ವರೆಗೆ ಅವರು ಜೀವಿಸಿದ್ದರೆಂದು ನಬಿವಚನಗಳಲ್ಲಿ ಪ್ರಸ್ತಾವಿಸಲಾಗಿದೆ. ಮುಹಮ್ಮದ್ ಪೈಗಂಬರ್ (ಸ) ಹೀಗೆ ನುಡಿದಿದ್ದರು: "ಈಸಬ್ನು ಮರ್‌ಯಂ 120 ವರ್ಷ ಬದುಕಿದ್ದರೆಂದು ನನ್ನೊಡನೆ ಜಿಬ್ರೀಲ್ ಹೇಳಿದರು". ಪೈಗಂಬರ್ ಹೇಳಿದುದಾಗಿ ಹಝ್ರತ್ ಆಯಿಶ ಸಿದ್ದೀಖ ಮತ್ತು ಹಝ್ರತ್ ಫಾತಿಮಾ ನಿವೇದಿಸಿದ ಈ ವಚನವನ್ನು ತಬ್ರಾನಿ ತನ್ನ "ಮುಅ್‌ಜಿಮುಲ್ ಕಬೀರ್" ಎಂಬ ಗ್ರಂಥದಲ್ಲೂ ಹಾಕಿಂ ತನ್ನ "ಮುಸ್ತದ್ರಿಕ್" ಎಂಬ ಗ್ರಂಥದಲ್ಲೂ ಉದ್ಧರಿಸಿದ್ದಾರೆ. ಹಝ್ರತ್ ಇಬ್ನು ಉಮರ್ ಸಹ ಈ ನಬಿವಚನವನ್ನು ನಿವೇದಿಸಿದ್ದಾರೆ. ಈ ಹದೀಸಿನ ಕುರಿತು ಅಲ್ಲಾಮಃ ಸರ್‌ಖಾನಿ ಹೀಗೆ ಹೇಳಿದ್ದಾರೆ: "ಈ ಹದೀಸನ್ನು ತಬ್ರಾನಿ ವಿಶ್ವಸನೀಯ ನಿವೇದಕರ ಮುಖಾಂತರ ತನ್ನ 'ಮುಅ್‌ಜಿಮುಲ್ ಕಬೀರ್' ಎಂಬ ಗ್ರಂಥದಲ್ಲಿ ಉದ್ಧರಿಸಿದ್ದಾರೆ." (ಮವಾಹಿಬುಲ್ಲದುನ್ನಿಯ್ಯ, ಜಿಲ್ದ್ 1: ಪುಟ4-). ಅಲ್ಲಾಮಃ ಸಿದ್ದೀಖ್ ಹಸನ್ ಖಾನ್ ಹೀಗೆ ಹೇಳಿದ್ದಾರೆ: "ಈಸಬ್ನು ಮರ್‌ಯಂ 120 ವರ್ಷ ಬದುಕಿದ್ದರೆಂಬ ಹದೀಸನ್ನು ತಬ್ರಾನಿ ತನ್ನ 'ಮುಅ್‌ಜಿಮುಲ್ ಕಬೀರ್' ಎಂಬ ಗ್ರಂಥದಲ್ಲಿ ವಿಶ್ವಾಸಾರ್ಹ ನಿವೇದಕರಿಂದ ಉದ್ಧರಿಸಿದ್ದಾರೆ. ಇದನ್ನು ಹಾಕಿಂ ತನ್ನ 'ಮುಸ್ತದ್ರಿಕ್' ಎಂಬ ಗ್ರಂಥದಲ್ಲಿ ನಿವೇದಿಸಿದ್ದಾರೆ." (ಹುಜಜುಲ್ ಕಿರಾಮಃ ಪುಟ 428). ಹೀಗೆ ಈಸಾನಬಿ 120ನೇ ವಯಸ್ಸಿನ ವರೆಗೆ ಬದುಕಿದ್ದರೆಂದು ಜಿಬ್ರೀಲ್ ಮುಖಾಂತರ ಲಭಿಸಿದ ತಿಳುವಳಿಕೆಯನುಸಾರ ಮುಹಮ್ಮದ್ ನಬಿ ನಮಗೆ ಕಲಿಸಿಕೊಟ್ಟಿರುವಾಗ ಈಸಾನಬಿ 33ನೇ ಪ್ರಾಯದಲ್ಲಿ ಶರೀರ ಸಹಿತ ಆಕಾಶಕ್ಕೆ ಎತ್ತಲ್ಪಟ್ಟರೆಂದು ಲಕ್ಷಗಟ್ಟಲೆ ಪಂಡಿತರು ಹೇಳುವುದಾದರೂ ಅದನ್ನು ನಂಬಲಸಾಧ್ಯ. ಹಾಗೆ 33ನೇ ವಯಸ್ಸಿನಲ್ಲಿ ಈಸಾನಬಿ ಆಕಾಶಕ್ಕೆತ್ತಲ್ಪಟ್ಟರೆಂಬ ವಿಶ್ವಾಸ ಆಧಾರ ರಹಿತವೂ ಕ್ರೈಸ್ತರ ಮೂಲಕ ಮುಸ್ಲಿಮರೆಡೆಯಲ್ಲಿ ಪ್ರಚುರಗೊಂಡದ್ದೂ ಎಂದು ಕೆಲವು ಪಂಡಿತರೇ ಒಪ್ಪಿದ್ದಾರೆ. "ಫತ್‌ಹುಲ್ ಬಯಾನ್" ಎಂಬ ಖುರ್‌ಆನ್ ಭಾಷ್ಯದಲ್ಲಿ ಈ ವಿಷಯದ ಸಂಬಂಧಿಸಿ ಹೀಗೆ ಉಲ್ಲೇಖಿಸಲಾಗಿದೆ: "ಹಾಫಿಝ್ ಇಬ್ನು ಖಯ್ಯಿಂ ತನ್ನ 'ಸಾದುಲ್‌ಮಆದ್' ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ: 'ಈಸಾ 33ನೇ ವಯಸ್ಸಿನಲ್ಲಿ ಎತ್ತಲ್ಪಟ್ಟರೆಂದು ಹೇಳುವುದಕ್ಕೆ ಆಧಾರವಾಗಿ ವಿಶ್ವಾಸಯೋಗ್ಯವಾದ ಯಾವ ಹದೀಸೂ ಇಲ್ಲ.' 33ನೇ ಪ್ರಾಯದಲ್ಲಿ ಎತ್ತಲ್ಪಟ್ಟರೆಂಬುದು ಕ್ರೈಸ್ತರಿಂದ ನಿವೇದಿಸಲಾದುದರಿಂದ ಅವರು (ಇಬ್ನು ಖಯ್ಯಿಂ) ಹೇಳಿದ್ದು ಸರಿಯೆಂದು ಶಾಮೀ ಹೇಳಿದ್ದಾರೆ" (ಫತ್‌ಹುಲ್ ಬಯಾನ್, ಜಿಲ್ದ್ 2, ಪುಟ 49). ಈಸಾನಬಿ 33ನೇ ಪ್ರಾಯದಲ್ಲಿ ಆಕಾಶಕ್ಕೆ ಎತ್ತಲ್ಪಡಲೇ ಇಲ್ಲವೆಂದೂ ಹಾಗೆ ಎತ್ತಲ್ಪಟ್ಟರೆಂಬ ವಿಶ್ವಾಸಕ್ಕೆ ಆಧಾರ ಕ್ರೈಸ್ತರ ವಿಶ್ವಾಸ ಮಾತ್ರವೆಂದೂ ವಾಸ್ತವದಲ್ಲಿ ಅವರು 120 ವರ್ಷಗಳ ವರೆಗೆ ಬದುಕಿದ್ದರೆಂದೂ ಇದರಿಂದ ವ್ಯಕ್ತವಾಗುತ್ತದೆ. ಹೀಗೆ ಅವರು 120 ವರ್ಷ ಜೀವಿಸಿದ್ದರೆಂದು ತಿಳಿದು ಬರುವಾಗ, ಅವರು 33ನೇ ವಯಸ್ಸಿನಲ್ಲಿ ಆಕಾಶಕ್ಕೆ ಎತ್ತಲ್ಪಟ್ಟರೆಂದೂ ಆ ಕಾಲದ ವರೆಗೆ ಅವರು ವಿವಾಹವಾಗಿಲ್ಲವೆಂದೂ ಕ್ರೈಸ್ತರು ಹೇಳುವುದರಿಂದ ಮಾತ್ರ ಅವರು ವಿವಾಹಿತರಾಗಿಲ್ಲವೆಂದು ನಂಬುವುದು ಸಮಂಜಸವಲ್ಲ.

ಈಸಾನಬಿ 33ನೇ ಪ್ರಾಯದ ವರೆಗೆ ಪೆಲೆಸ್ತೀನದಲ್ಲಿ ನಡೆಸಿದ ಜೀವನದ ಕುರಿತು ಮಾತ್ರವೇ 'ಸುವಾರ್ತೆ'ಗಳಲ್ಲಿ ವಿವರಿಸಲ್ಪಟ್ಟಿದ್ದರೂ ಅವರು ದಿವ್ಯದೌತ್ಯ ನಿರ್ವಹಿಸಿದ ಸತ್ಯ ಪ್ರವಾದಿಯಾಗಬೇಕಾದರೆ ಅದರ ಬಳಿಕವೂ ಅವರು ಬದುಕಿದ್ದುಕೊಂಡು ಇಸ್ರಾಯೇಲ್ ಗೋತ್ರಗಳೆಡೆಯಲ್ಲೆಲ್ಲಾ ತನ್ನ ದೌತ್ಯವನ್ನು ಪ್ರಬೋಧಿಸಿರಬೇಕಾಗಿತ್ತು. ಏಕೆಂದರೆ, ಅವರು ಇಸ್ರಾಯೀಲ್ಯರಿಗೆ ಪ್ರವಾದಿಯಾಗಿ ಆಗಮಿಸಿದ್ದವರೆಂದು ಪವಿತ್ರ ಖುರ್‌ಆನಿನಿಂದಲೂ 'ಸುವಾರ್ತೆ'ಗಳಲ್ಲಿ ಕಂಡು ಬರುವ ಅವರ ಸ್ವಂತ ವಚನಗಳಿಂದಲೂ ಸ್ಪಷ್ಟವಾಗುತ್ತದೆ. ಆದರೆ, ಅವರು ಪೆಲಸ್ತೀನದಲ್ಲಿ ಪ್ರವಾದಿಯಾಗಿ ನಿಯೋಗಿಸಲ್ಪಟ್ಟ ಕಾಲದಲ್ಲಿ ಹನ್ನೆರಡು ಇಸ್ರಾಯೇಲ್ ಗೋತ್ರಗಳ ಪೈಕಿ ಎರಡು ಗೋತ್ರಗಳು ಮಾತ್ರ ಅಲ್ಲಿ ವಾಸಿಸುತ್ತಿದ್ದವು. ಬಾಕಿ ಹತ್ತು ಗೋತ್ರಗಳಿಗೆ ಸೇರಿದವರು ಈಸಾನಬಿಯ ಆವಿರ್ಭಾವಕ್ಕಿಂತ ಮೊದಲೇ, ಅಸ್ಸೀರಿಯನ್ ರಾಜನಾದ ಶಾಲಮನ್‌ಸರ್ ಅವರನ್ನು ಪೂರ್ವ ದೇಶಕ್ಕೆ ಕೈದಿಗಳನ್ನಾಗಿ ಕೊಂಡು ಹೋದುದರಿಂದ, ಅಫ್‌ಘಾನಿಸ್ತಾನ್, ಕಾಶ್ಮೀರ ಮೊದಲಾದ ರಾಜ್ಯಗಳಲ್ಲಿ

ತಳವೂರಿದ್ದರು. ಈ ವಾಸ್ತವತೆಯನ್ನು ಚರಿತ್ರೆಯಿಂದ ಗ್ರಹಿಸಬಹುದಾಗಿದೆ.* ಹಾಗಿರುವಾಗ, ಇಸ್ರಾಯಿಲ್ಯರಿಗಾಗಿ ನಿಯೋಜಿತರಾದ ಈಸಾನಬಿ ಪೆಲಸ್ತೀನದ ಆ ಎರಡು ಗೋತ್ರಗಳೊಂದಿಗೆ ಮಾತ್ರ ಅಲ್ಪಕಾಲ ತನ್ನ ದೌತ್ಯ ಪ್ರಬೋಧಿಸಿದ ನಂತರ ಬಹುಸಂಖ್ಯಾತರಾದ ಬಾಕಿ ಗೋತ್ರದವರಿಗೆ ಬೋಧಿಸಲಿಕ್ಕಾಗಿ ಆ ಗೋತ್ರಗಳು ನೆಲಸಿರುವ ಪ್ರದೇಶಗಳಿಗೆ ಹೋಗಿ ಅವರೊಂದಿಗೆ ಜೀವಿಸಿರಬೇಕಾಗಿತ್ತು. ಹಾಗೆ ಅವರು ಆ ಬಾಕಿ ಗೋತ್ರಗಳಿಗೂ ಸನ್ಮಾರ್ಗವನ್ನು ಬೋಧಿಸಿರಲಿಲ್ಲವೆಂದಾದರೆ ಅವರು ದಿವ್ಯ ದೌತ್ಯವನ್ನು ನಿರ್ವಹಿಸಲಿಲ್ಲವೆಂದೂ ತನ್ನ ಆಗಮನೋದ್ದೇಶವನ್ನು ಸಫಲಗೊಳಿಸಲಿಲ್ಲವೆಂದೂ ಹೇಳಬೇಕಾದೀತು. ಇಸ್ರಾಯಿಲ್ಯರು ಆ ಕಾಲದಲ್ಲಿ ಕಾಶ್ಮೀರ ಮೊದಲಾದ ಪೂರ್ವ ರಾಜ್ಯಗಳಲ್ಲಿ ವಾಸಿಸುತ್ತಿದ್ದರೆಂಬ ಸಂಗತಿಯನ್ನು ನಾನಿಲ್ಲಿ ವಿವರಿಸುವುದಿಲ್ಲ. ಆದರೆ ಈಸಾನಬಿ ಪೆಲಸ್ತೀನದಲ್ಲಿ ಪ್ರವಾದಿಯಾಗಿ ನಿಯುಕ್ತರಾಗಿದ್ದ ಕಾಲದಲ್ಲಿ ಅಲ್ಲಿ ಎರಡು ಇಸ್ರಾಯೇಲ್ ಗೋತ್ರಗಳು ಮಾತ್ರವಿದ್ದವೆಂಬುದನ್ನು ಯಹೂದರೂ ಕ್ರೈಸ್ತರೂ ಒಪ್ಪುತ್ತಾರೆ. ಆದ್ದರಿಂದ, ಬಾಕಿ ಗೋತ್ರಗಳು ವಾಸಿಸಿಕೊಂಡಿದ್ದ ರಾಜ್ಯಗಳಿಗೆ ಅವರು ಹೋಗಿ ತನ್ನ ದೌತ್ಯವನ್ನು ಪ್ರಬೋಧಿಸುವುದು ಅವರ ಧರ್ಮವಾಗಿತ್ತು. ಅದು ಅವರು ನಿರ್ವಹಿಸಲಿಲ್ಲವೆಂದು ಊಹಿಸಲಸಾಧ್ಯ. ಅವರು ಪೆಲಸ್ತೀನದಿಂದ ಬೇರೆ ದೇಶಕ್ಕೆ ಹೋಗಿ ವಾಸಿಸಿದ್ದರೆಂದು ಪವಿತ್ರ ಖುರ್‌ಆನಿನಿಂದ ತಿಳಿದು ಬರುತ್ತದೆ. ಅಲ್ಲಾಹನು ಹೀಗೆ ನುಡಿದಿರುವನು: "ನಾವು ಇಬ್ನುಮರ್‌ಯಮನ್ನೂ ಅವರ ತಾಯಿಯನ್ನೂ ಒಂದು ಕುರುಹನ್ನಾಗಿ ಮಾಡಿ, ವಾಸಯೋಗ್ಯವಾದ, ಜಲಸಮೃದ್ಧಿಯಿಂದ ಕೂಡಿದ ಉನ್ನತ ಪ್ರದೇಶವೊಂದರಲ್ಲಿ ಅವರೀರ್ವರಿಗೂ ಅಭಯ ನೀಡಿರುವೆವು." (23 : 51)

ಅಲ್ಲಾಹನು ಈಸಾನಬಿಯನ್ನು, ಅವರಿಗೆದುರಾದ ಒಂದು ಮಹಾ ಗಂಡಾಂತರದಿಂದ ರಕ್ಷಿಸಿ, ಜಲಸಮೃದ್ಧಿ ಮತ್ತು ಫಲಪುಷ್ಪಗಳಿಂದ ಕೂಡಿದ ಒಂದು ಉನ್ನತ ಪ್ರದೇಶದಲ್ಲಿ ಅವರಿಗೆ ವಾಸಿಸಲು ಸೌಕರ್ಯ ಒದಗಿಸಿದನೆಂದು ಈ ಮೇಲಿನ ಖುರ್‌ಆನ್ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಈ ವಚನದಲ್ಲಿ ಹೇಳಲಾದ ಲಕ್ಷಣಗಳಿಂದ ಕೂಡಿದ ರಾಜ್ಯ ಕಾಶ್ಮೀರವೆಂಬುದು ದಿಟ. ಅವರ ಅಭಯಸ್ಥಳ ಏಲಿಯವೆಂದೂ ರಂಲವೆಂದೂ ಮಿಸ್ರೆಂದೂ ದಿಮಷ್ಕೆಂದೂ ಭಾಷ್ಯಗಾರರೆಡೆಯಲ್ಲಿ ಭಿನ್ನಾಭಿಪ್ರಾಯವಿದೆ. ಆದರೆ ಪೆಲಸ್ತೀನದ ದ್ರೋಹಿಗಳಾದ ಯಹೂದರ ಆಕ್ರಮಗಳಿಂದ ರಕ್ಷೆಹೊಂದಲಿಕ್ಕೆ ಈಸಾನಬಿ ಮೇಲೆ ಹೇಳಿದ ಯಾವುದಾದರೊಂದು ಸ್ಥಳದಲ್ಲಿ ಅಭಯ ಪಡೆದಿದ್ದರೆಂದು ಭಾವಿಸಲಿಕ್ಕೆ ನಿರ್ವಾಹವಿಲ್ಲ. ಏಕೆಂದರೆ ಆ ಸ್ಥಳಗಳಲ್ಲಿ ಎಲ್ಲಿದ್ದರೂ ಅವರಿಗೆ ಯಹೂದರ ಕೈಯಿಂದ ಪಾರಾಗಲು ಅಸಾಧ್ಯವಾಗಿತ್ತು. ಆದ್ದರಿಂದ, ಅವರನ್ನು ಯಹೂದರ ದ್ರೋಹ ಕೃತ್ಯಗಳಿಂದ ಅಲ್ಲಾಹನು ರಕ್ಷಿಸಿದ ನಂತರ ಮತ್ತೂ ಪೆಲಸ್ತೀನದಲ್ಲೇ ನೆಲಸುವಂತೆ ಮಾಡಿದನೆಂದು ಭಾವಿಸುವುದು ಸರಿಯಲ್ಲ. ಅವರಿಗೆ ಈ ಅಭಯ ಲಭಿಸಿದ್ದು ಅವರ ದಿವ್ಯನಿಯೋಗದ ನಂತರ ಉಂಟಾದ ಒಂದು ಅಪಾಯ ಘಟನೆಯ ಸಂದರ್ಭದಲ್ಲಾಗಿರಬೇಕೆಂದು ಖುರ್‌ಆನಿನಿಂದ ಮನಗಾಣಬಹುದು. ಏಕೆಂದರೆ, ಪ್ರವಾದಿಗಳಿಗೆ ದೇವರಿಂದ ಲಭಿಸುವ ವಿಜಯ ಮತ್ತು ಅವರ ಶತ್ರುಗಳಿಗೆ ಉಂಟಾಗುವ ಪರಾಜಯಕ್ಕೆ ಸಂಬಂಧಿಸಿದ ಪ್ರಸ್ತಾಪನೆಗಳ ಮಧ್ಯೆ ಈಸಾನಬಿಯ ಕುರಿತು ಮೇಲಿನಂತೆ ಖುರ್‌ಆನಿನಲ್ಲಿ ಉಲ್ಲೇಖಿತವಾಗಿದೆ. ಆದ್ದರಿಂದ, ಅಲ್ಲಾಹನು ಅವರಿಗೆ ನೀಡಿದ ಆ ಅಭಯದಾನವು ಯಹೂದರು ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ಮಾಡಿದ ಪ್ರಯತ್ನದ ಸಂದರ್ಭದಲ್ಲಾಗಿರಲಿಕ್ಕೇ ಸಾಧ್ಯತೆಯಿದೆ ಮಗನಿಗೆ ಒದಗಿದ ಆ ಆಪತ್ತು ತಾಯಿಗೂ ಆಪತ್ತಾದುದರಿಂದಲೂ ಮಗನೊಂದಿಗೆ ತಾಯಿಗೂ ಅಭಯ ನೀಡಿದುದರಿಂದಲೂ ಅವರೀರ್ವರಿಗೂ ಅಭಯ ನೀಡಲಾಯಿತೆಂದು ಅಲ್ಲಾಹನು ಮೇಲಿನ ಖುರ್‌ಆನ್ ವಾಕ್ಯದಲ್ಲಿ ಹೇಳಿದ್ದು. ಒಟ್ಟಾರೆ, ಈಸಾನಬಿಯನ್ನು ಅಲ್ಲಾಹನು ಶಿಲುಬೆಯ ಮೇಲಿನ ಮರಣದಿಂದ ರಕ್ಷಿಸಿ, ಮೇಲಿನ ಖುರ್‌ಆನ್ ವಚನದಲ್ಲಿ ವಿವರಿಸಲಾದ ಲಕ್ಷಣಗಳಿಂದ ಕೂಡಿದ-ಇಸ್ರಾಯೇಲ್ ಗೋತ್ರಗಳು ವಾಸಿಸುತ್ತಿದ್ದ–ಒಂದು ಪ್ರದೇಶದಲ್ಲಿ ಅವರಿಗೆ ಅಭಯ ನೀಡಿದನೆಂದು ಅದರಿಂದ ಮನವರಿಕೆಯಾಗುತ್ತದೆ. "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (ಮತ್ತಾಯ 15:24) ಮತ್ತು "ಮನುಷ್ಯ ಕುಮಾರನು ಕೆಟ್ಟು ಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು" (ಲೂಕ 19:10) ಎಂದು ಅವರು ಹೇಳಿ,

---

* ಹಝ್ರತ್ ಅಹ್ಮದರ ''ಮಸೀಹ್ ಹಿಂದುಸ್ತಾನ್‌ಮೆ'' ಎಂಬ ಗ್ರಂಥದಲ್ಲಿ ಈ ವಿಷಯವನ್ನು ಸವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.

ತಾನು ಇಸ್ರಾಯೇಲ್ ಗೋತ್ರಗಳಲ್ಲಿ ಕಾಣೆಯಾದ ಗೋತ್ರಗಳ ಬಳಿಗೆ ಹೋಗಿ ಅವರಿಗೆ ಸನ್ಮಾರ್ಗವನ್ನು ಬೋಧಿಸಲಿಕ್ಕಾಗಿ ನಿಯುಕ್ತನಾದವನೆಂದು ಸ್ಪಷ್ಟಪಡಿಸಿರುವರು.

ಇಸ್ರಾಯೇಲ್ ಗೋತ್ರಗಳು ನೆಲಸಿದ್ದ ಸ್ಥಳಗಳಲ್ಲಿ ಈಸಾನಬಿ ಸಂಚರಿಸುತ್ತಿದ್ದರೆಂದು ನಬಿವಚನಗಳಿಂದಲೂ ತಿಳಿದು ಬರುತ್ತದೆ. ಪೈಗಂಬರರು ಹೀಗೆ ನುಡಿದಿದ್ದರು: "ಅಲ್ಲಾಹನು ಈಸಾರಿಗೆ ಹೀಗೆ ಅರುಹಿದನು: ಓ ಈಸಾ, ನೀನು ಗುರುತಿಸಲ್ಪಡದಿರಲಿಕ್ಕಾಗಿಯೂ ಪೀಡಿಸಲ್ಪಡದಿರಲಿಕ್ಕಾಗಿಯೂ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತಾ ಇರು" (ಕನ್‌ಸುಲ್ ಉಮ್ಮಾಲ್, ಜಿಲ್ದ್ 2, ಪುಟ 34). ಮತ್ತೊಮ್ಮೆ ಪೈಗಂಬರರು ಹೀಗೆ ಹೇಳಿದರು: "ಸಂಧ್ಯೆಯಾಗುವಾಗ ಕಾಡಿನ ಸಸ್ಯ ವರ್ಗಗಳನ್ನು ತಿನ್ನುತ್ತಾ ಸ್ವಚ್ಛಜಲ ಕುಡಿಯುತ್ತಾ ಈಸಬ್ನು ಮರ್‌ಯಂ ದೇಶ ಸಂಚಾರ ಮಾಡುತ್ತಿದ್ದರು." (ಕನ್‌ಸುಲ್ ಉಮ್ಮಾಲ್ ಜಿಲ್ದ್ 2, ಪುಟ 71). ಈ ಹದೀಸುಗಳಿಂದ ತಿಳಿದು ಬರುವ ಈಸಾನಬಿಯ ದೇಶ ಸಂಚಾರ, ಅವರು ಪೆಲಸ್ತೀನಿನಲ್ಲಿ ಜೀವಿಸಿದ್ದ ಕಾಲದಲ್ಲಿ ನಡೆದದ್ದೆಂದು ಯಾವ ರೀತಿಯಲ್ಲೂ ಭಾವಿಸಲಿಕ್ಕೆ ಸಾಧ್ಯವಿಲ್ಲ. ಅಂತಿರುವಾಗ, ಅದು ಅವರು ತನ್ನ ಸ್ವದೇಶದಿಂದ ಇಸ್ರಾಯೇಲ್ ಗೋತ್ರಗಳು ವಾಸ ಮಾಡಿಕೊಂಡಿದ್ದ ಪರದೇಶಗಳಿಗೆ ಹೋದ ಆ ಸುದೀರ್ಘ ಯಾತ್ರೆ ಆಗಿರಲಿಕ್ಕೇ ಸಾಧ್ಯ. ಇಸ್ರಾಯೇಲ್ ಗೋತ್ರಗಳು ನೆಲಸಿದ್ದ ಭಾರತದ ಉತ್ತರ ಭಾಗದಲ್ಲಿ ಈಸಾನಬಿ ಸಂಚರಿಸಿದ್ದರೆಂಬ ಸಂಗತಿ ಅಹ್ಮದಿಯಾ ಜಮಾಅತಿನ ವಿರೋಧಿಗಳು ಸಹ ಒಪ್ಪಿಕೊಂಡಿದ್ದಾರೆ. ಉದಾಹರಣೆಗಾಗಿ, ಈಸಾನಬಿಯ ಪ್ರಸ್ತುತ ಸಂಚಾರದ ಕುರಿತು ಪ್ರತಿಪಾದಿಸುತ್ತಾ ಶೈಖ್ ರಶೀದ್‌ರಿಸಾ ತನ್ನ ಖುರ್‌ಆನ್ ಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ: "ಅವರು (ಈಸಾನಬಿ) ಭಾರತಕ್ಕೆ ಪಲಾಯನ ಮಾಡಿದರೆಂಬುದೂ ಆ ದೇಶದಲ್ಲಿ ಅವರು ಮೃತಿಹೊಂದಿದರೆಂಬುದೂ ವಿವೇಕಕ್ಕೂ ಪ್ರಮಾಣಕ್ಕೂ ವಿರುದ್ಧವಲ್ಲ" (ತಫ್‌ಸೀರುಲ್ ಮನಾರ್, ಜಿಲ್ದ್ 6, ಪುಟ 42)

ಸಂಕ್ಷಿಪ್ತವಾಗಿ, ಈಸಾನಬಿ ಹೀಗೆ ಶಿಲುಬಾ ಪ್ರಕರಣದ ನಂತರ, ವಲಸೆಹೋಗಿದ್ದ ಹತ್ತು ಇಸ್ರೇಲ್ ಗೋತ್ರಗಳ ವಾಸದೇಶಗಳಿಗೆ ಹೋಗಿ ಅವರೊಂದಿಗೆ 120 ವಯಸ್ಸಿನ ವರೆಗೆ ಜೀವಿಸಿದ್ದರೆಂದು ರುಜುಗೊಳ್ಳುವಾಗ ಅವರು ವಿವಾಹವಾಗಿದ್ದರೇ ಎಂಬ ಸಂಗತಿ ಸುಲಭದಲ್ಲಿ ಗ್ರಹಿಸಬಹುದಾಗಿದೆ. ಇಷ್ಟು ದೀರ್ಘಕಾಲ ಲಕ್ಷಗಟ್ಟಲೆ ಇಸ್ರಾಯೇಲರ ಮಧ್ಯದಲ್ಲಿ ಜೀವಿಸಿ ಕೂಡ ಅವರು ವಿವಾಹ ಮಾಡಿಕೊಂಡಿರದಿದ್ದರೆ ಕೆಳಗೆ ಹೇಳುವ ಮೂರು ಕಾರಣಗಳಲ್ಲಿ ಯಾವುದಾದರೊಂದು ಅವರಿಗೆ ಪ್ರತಿಬಂಧಕವಾಗಿರಬೇಕು:

1. ಒಂದನೆಯದಾಗಿ, ವಿವಾಹ ಆಧ್ಯಾತ್ಮಿಕತೆಗೂ ದೇವರೊಡನಿರುವ ಪ್ರೇಮಬಂಧಕ್ಕೂ ಪ್ರತಿಕೂಲವೆಂದು ತಾನು ಭಾವಿಸಿದುದರಿಂದ ಅವರು ವಿವಾಹಿತರಾಗಲಿಲ್ಲವೆಂದು ಭಾವಿಸಲಿಕ್ಕೆ ನಿರ್ವಾಹವಿಲ್ಲ. ಏಕೆಂದರೆ, ಆಧ್ಯಾತ್ಮಿಕತೆಯಲ್ಲೂ ದೈವಬಂಧದಲ್ಲೂ ಅವರಿಗಿಂತ ಉತ್ಕೃಷ್ಟ ಸ್ಥಾನಗಳಿಸಿದವರೆಂದು ಖುರ್‌ಆನಿನಿಂದಲೂ ಹದೀಸಿನಿಂದಲೂ ತಿಳಿದುಬರುವ ಹಾಗೂ ಮುಸ್ಲಿಮರು ಅದೇ ಪ್ರಕಾರ ನಂಬುವ ಮುಹಮ್ಮದ್ ನಬಿ(ಸ), ಮೂಸಾ ನಬಿ(ಅ), ಇಬ್ರಾಹಿಂ ನಬಿ(ಅ) ಮೊದಲಾದ ಪ್ರವಾದಿಗಳು ವಿವಾಹ ಮಾಡಿಕೊಂಡಿದ್ದರು ಮಾತ್ರವಲ್ಲ, ಬಹುಪತ್ನೀತ್ವವನ್ನು ಕೈಗೊಂಡಿದ್ದರು. ಅಂತಿರುವಾಗ, ಮೂಸಾನಬಿಯ ನ್ಯಾಯಪ್ರಮಾಣವನ್ನು ಬೋಧಿಸಲಿಕ್ಕೆ ಬಂದವನೆಂದು ಸ್ವಯಂ ಒಪ್ಪಿಕೊಂಡು ಹೇಳಿದ ಈಸಾನಬಿ ವಿವಾಹವನ್ನು ಆಧ್ಯಾತ್ಮಿಕತೆಗೆ ಸರಿಹೊಂದದ ಒಂದು ಏರ್ಪಾಡೆಂದು ಭಾವಿಸಿ ಅದರಿಂದ ಅಗಲಿ ನಿಂತರೆಂದು ಭಾವಿಸುವುದು ಸರಿಯಲ್ಲ.

2. ಅವರು ವಿವಾಹಿತರಾಗದೆ ಇದ್ದುದು ಅವರಿಗೆ ಪತ್ನಿಯಾಗಿ ಸ್ವೀಕರಿಸಲು ತನ್ನ ಜನತೆಯಿಂದ ಯಾರೂ ಸಿಗದೆ ಇದ್ದುದರಿಂದಾಗಿರಬೇಕೆಂದು ಭಾವಿಸಲಿಕ್ಕೆ ಎಡೆಯಿಲ್ಲ. ಲಕ್ಷಗಟ್ಟಲೆ ಇಸ್ರಾಯೇಲರ ಜೊತೆಯಲ್ಲಿ ದೀರ್ಘಕಾಲ ಧರ್ಮಬೋಧನೆ ಮಾಡುತ್ತಾ ಜೀವಿಸಿದ್ದ ಆ ಆತ್ಮಗುರುವಿಗೆ ಸಾವಿರಗಟ್ಟಲೆ ಅನುಚರರು ಇದ್ದಿರಬೇಕು. ಅವರಲ್ಲಿ ಪ್ರತಿಯೊಬ್ಬ ತನ್ನ ಸ್ವಂತ ಮಗಳನ್ನಾಗಲಿ ಸಹೋದರಿಯನ್ನಾಗಲಿ ತನ್ನ ಭಕ್ತ್ಯಾದರಗಳಿಗೆ ಪಾತ್ರರಾದ ಆ ಗುರುವಿಗೆ ವಿವಾಹ ಮಾಡಿಸಿಕೊಡುವುದು ಅತಿ ಸಂತೋಷಕರವೂ ಅನುಗ್ರಹ ಲಬ್ಧಿಗೆ ಕಾರಣವೂ ಎಂದು ಭಾವಿಸುವುದು ಖಂಡಿತ. ಹಾಗಿರುವಾಗ, ಅವರಿಗೆ ಯಾರೂ ಪತ್ನಿಯಾಗಿ ಲಭಿಸದಿದ್ದ ಕಾರಣದಿಂದ ಅವರು ವಿವಾಹವಾಗದೆ ಇದ್ದಿರಬೇಕೆಂದು ಭಾವಿಸುವುದು ನ್ಯಾಯಯುತವಲ್ಲ.

3. ಅವರು ರೋಗಿಯಾಗಿದ್ದ ಕಾರಣ–ಅವರಿಗೆ ಪುರುಷ ಶಕ್ತಿ ನಷ್ಟವಾದ ಕಾರಣ–ಅವರು ವಿವಾಹ ಮಾಡಿ

ಕೊಂಡಿರಲಿಲ್ಲ ಎಂದು ಸಹ ಭಾವಿಸಲಿಕ್ಕಾಗದು, ಏಕೆಂದರೆ, ಅವರು ಹಾಗೆ ರೋಗಿಯಾಗಿದ್ದರೆಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಬದಲಿಗೆ, ಪೆಲಸ್ತೀನದ ಅವರ ಜೀವನ ಚರ್ಯೆಗಳಿಂದ ಅವರು ಒಳ್ಳೆಯ ಆರೋಗ್ಯವಂತನೂ ದೃಢಕಾಯನೂ ಆಗಿದ್ದರೆಂದು ತಿಳಿದು ಬರುತ್ತದೆ. ಮಾತ್ರವಲ್ಲ, ದೇವರ ಒಬ್ಬ ಪ್ರವಾದಿಯು ಕುರಿತು ಅವರು ಪುರುಷ ಶಕ್ತಿನಷ್ಟಹೊಂದಿದ ರೋಗಿಯಾಗಿದ್ದರೆಂದು ಭಾವಿಸುವುದು ಅವರ ಮೇಲೆ ಇರಬೇಕಾದ ಭಕ್ತ್ಯಾದರಗಳಿಗೆ ಸರಿಹೊಂದುವುದಿಲ್ಲ. ಈ ಸ್ಥಿತಿ ಯಾವ ರೀತಿಯಲ್ಲೂ ಅವರ ಶ್ರೇಷ್ಠತೆಗೆ ಕಾರಣವಾಗುವುದೂ ಇಲ್ಲ.

ಸಂಕ್ಷಿಪ್ತದಲ್ಲಿ, ಅವಿವಾಹಿತರಾಗಿ ಉಳಿಯಲಿಕ್ಕೆ ಇರಬೇಕಾದ ಮೂರು ಕಾರಣಗಳಲ್ಲಿ ಯಾವುದೂ ಸಹ ಈಸಾನಬಿಗೆ ಇರಲಿಲ್ಲವೆಂದಾಗುವಾಗ, ಖಂಡಿತವಾಗಿಯೂ ಅವರು ವಿವಾಹಿತರಾಗಿರಬೇಕೆಂದೇ ಭಾವಿಸಬೇಕಾಗಿದೆ. ಆದರೆ ಪೆಲಸ್ತೀನದ ಹೊರಗಿನ ಅವರ ಜೀವನ ವೃತ್ತಾಂತ ಚರಿತ್ರೆಗೆ ಅಜ್ಞಾತವಾಗಿರುವುದರಿಂದ ಅವರ ವಿವಾಹದ ಕುರಿತು ನಮಗೆ ಚರಿತ್ರೆ ಮೂಲಕ ತಿಳಿಯಲು ಅಸಾಧ್ಯವಾಗಿದೆ. ಆದರೂ ಅವರು ವಿವಾಹಿತರೆಂದು ಪವಿತ್ರ ಖುರ್‌ಆನಿನಿಂದ ಮನವರಿಕೆಯಾಗುತ್ತದೆ. ಅಲ್ಲಾಹು ಹೀಗೆ ಹೇಳುತ್ತಾನೆ: "ನಿನಗೆ ಮೊದಲು ನಾವು ಪ್ರವಾದಿಗಳನ್ನು ನಿಯೋಗಿಸಿ ಅವರಿಗೆ ಪತ್ನಿಯರನ್ನೂ ಮಕ್ಕಳನ್ನೂ ನೀಡಿರುವೆವು" (13:39). ಈ ವಚನದಿಂದ ಮುಹಮ್ಮದ್ ಪೈಗಂಬರರ ಮೊದಲು ಬಂದ ಪ್ರವಾದಿಗಳಿಗೆ ಪತ್ನಿ, ಮಕ್ಕಳು ಇದ್ದರೆಂದು ಸ್ಪಷ್ಟವಾಗುತ್ತದೆ. ಈಸಾನಬಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ನಿಕಟಪೂರ್ವದಲ್ಲಿ ಬಂದ ಪ್ರವಾದಿಯಾದ್ದರಿಂದ, ಅವರು ಇದರಿಂದ ಹೊರತಾಗಲಿಕ್ಕೆ ಯಾವ ನ್ಯಾಯವೂ ಇಲ್ಲ. ಮಾತ್ರವಲ್ಲ, ಮೊದಲು ಆಗಮಿಸಿದ ಪ್ರವಾದಿಗಳಿಗೆ ಪತ್ನಿ, ಮಕ್ಕಳು ಇದ್ದರೆಂಬ ಮೇಲಿನ ಹೇಳಿಕೆ ಮುಹಮ್ಮದ್ ಪೈಗಂಬರರಿಗೆ ನಿಕಟಪೂರ್ವದಲ್ಲಿ ಆಗಮಿಸಿದ ಈಸಾನಬಿಗೆ ಮುಖ್ಯವಾಗಿ ಅನ್ವಯಿಸಬೇಕಾಗಿದೆ. ಅಲ್ಲವಾದರೆ, ಆ ಪ್ರಸ್ತಾಪನೆ ಸರಿಯೇ ಎಂದೂ ಸರಿಯೆಂದಾದರೆ ಈಸಾನಬಿಗೆ ಪತ್ನಿ, ಮಕ್ಕಳು ಇದ್ದರೇ ಎಂದೂ ಪ್ರಶ್ನೆಯೇಳುತ್ತದೆ. ಅವರಿಗೆ ಪತ್ನಿ, ಮಕ್ಕಳು ಇಲ್ಲವೆಂದಾದಲ್ಲಿ ಖುರ್‌ಆನಿನ ಹೇಳಿಕೆ ಅಸತ್ಯ ಅಥವಾ ಅವರು ಇತರ ಪ್ರವಾದಿಗಳಂತೆ ಅಲ್ಲ, ಕ್ರೈಸ್ತರು ನಂಬುವ ಪ್ರಕಾರ ಒಬ್ಬ ದೇವ ಎಂದು ಒಪ್ಪಬೇಕಾದೀತು.

—o—o—


# A Man That is Called JESUS

**By A. R. MALABARI**

Highly interesting English volume.
A critical study on the life and character of Jesus
covering 400 pages Demi 1/8 size. Price: 30-00

Please Contact:

**M. ALIKOYA**
Y. M. C. A. Road, CALICUT.

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-4

# ಪೈಗಂಬರರ ಮೇಲೆ ಹಲ್ಲೆ

★ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಇಸ್ಲಾಂ ಧರ್ಮದಲ್ಲಿ ವಿಶ್ವಾಸ ತಳೆದ ಕಾರಣಕ್ಕಾಗಿ ವಿರೋಧಿಗಳ ಅತ್ಯಾಚಾರಕ್ಕೂ ದುರಾಕ್ರಮಣಕ್ಕೂ ಗುರಿಯಾಗುವಲ್ಲಿ ಇಸ್ಲಾಂ ಧರ್ಮ ಸಂದೇಶವಾಹಕರಾದ ಸ್ವತಃ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರೂ ಸಹ ಸುರಕ್ಷಿತರಾಗಿರಲಿಲ್ಲ. ಅವರಿಗೂ ನಾನಾ ತರದ ಹಿಂಸೆಗಳನ್ನು ನೀಡಲಾಗುತ್ತಿತ್ತು. ಒಂದು ಸಲ, ಹಝ್ರತ್ ಪೈಗಂಬರರು ಪ್ರಾರ್ಥನಾಮಗ್ನರಾಗಿದ್ದ ವೇಳೆ ಅವಿಶ್ವಾಸಿಗಳಾದ ಕೆಲವು ದುಷ್ಕರ್ಮಿಗಳು ಅವರ ಕುತ್ತಿಗೆಗೆ ಒಂದು ರುಮಾಲು ಕಟ್ಟಿ ಎಳೆಯತೊಡಗಿದರು. ಎಷ್ಟರವರೆಗೆಂದರೆ, ಆ ಬಿಗಿತದಿಂದಾಗಿ ಅವರ ಕಣ್ಣುಗಳು ಉಬ್ಬಿಬಂದವು. ಅಷ್ಟರಲ್ಲಿ ಅಲ್ಲಿಗೆ ಬಂದ ಹಝ್ರತ್ ಅಬೂಬಕರ್ ಇದನ್ನು ಕಂಡು "ಎಲೈ ಜನರೇ, ಪರಮಾತ್ಮನು ತನ್ನ ಒಡೆಯನೆಂದು ಸಾರಿದ ಏಕಮಾತ್ರ ಕಾರಣಕ್ಕಾಗಿ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುತ್ತಿರುವಿರಾ?" ಎಂದು ಕೇಳುತ್ತಾ ಪೈಗಂಬರರನ್ನು ಅವರಿಂದ ಬಿಡುಗಡೆಗೊಳಿಸಿದರು (ಬುಖಾರಿ). ಮತ್ತೊಂದು ಸಂದರ್ಭದಲ್ಲಿ ಪೈಗಂಬರರು ನಮಾಜ್ ಪ್ರಾರ್ಥನೆಯಲ್ಲಿ ತಲ್ಲೀನರಾಗಿದ್ದಾಗ ಎದುರಾಳಿಗಳು ಅವರ ಬೆನ್ನಲ್ಲಿ ಒಂದು ಒಂಟೆಯ ಕರುಳನ್ನು ತಂದು ಹಾಕಿದರು. ಅವರ ಬೆನ್ನ ಮೇಲಿಂದ ಆ ಕರುಳುಮಾಲೆಯನ್ನು ನೀಗಿಸುವ ತನಕ ಅದರ ಭಾರದ ನಿಮಿತ್ತ ಅವರಿಗೆ ಸಾಷ್ಟಾಂಗದಿಂದ ಎದ್ದೇಳಲು ಸಾಧ್ಯವಾಗಲಿಲ್ಲ (ಬುಖಾರಿ).

ಒಂದು ಸಲ ಪೈಗಂಬರರು ರಸ್ತೆಯಲ್ಲಿ ನಡೆಯುತ್ತಿದ್ದಾಗ ಮಕ್ಕಾದ ದುಷ್ಟ ಜನರ ಒಂದು ಸಮೂಹವು ಅವರನ್ನು ಹಿಂಬಾಲಿಸಿ ಅವರ ಬೆನ್ನು ಮತ್ತು ಭುಜದ ಮೇಲೆ ಕುಟ್ಟುತ್ತಾ ಮಾರ್ಗದುದ್ದಕ್ಕೂ "ಜನರೇ, ಈತನು ತಾನು ದೇವರಿಂದ ನಿಯೋಗಿಸಲ್ಪಟ್ಟ ಪ್ರವಾದಿಯೆಂದು ಹೇಳುತ್ತಾನೆ" ಎಂಬುದಾಗಿ ಹೀಯಾಳಿಸಿದರು.

ಮುಹಮ್ಮದ್ ಪೈಗಂಬರರ ಮನೆಯ ಮೇಲೆ ಕಲ್ಲೆಸೆಯುವುದನ್ನು ಸುತ್ತಮುತ್ತಲಿನ ನಿವಾಸಿಗಳು ಒಂದು ನಿತ್ಯ ವೃತ್ತಿಯನ್ನಾಗಿ ಮಾಡಿದ್ದರು. ಆಡು, ಒಂಟೆ ಮೊದಲಾದ ಮೃಗಗಳ ಕರುಳುಗಳಂತಹ ದುರ್ಗಂಧಮಯವಾದ ವರ್ಜ್ಯ ವಸ್ತುಗಳನ್ನು ಅವರ ಅಡುಗೆ ಮನೆಗೆ ಎಸೆಯಲಾಗುತ್ತಿತ್ತು. ಅವರು ನಮಾಝ್ ಪ್ರಾರ್ಥನೆಗೆ ನಿಂತರೆ, ಅವರ ಮೇಲೆ ಕಸಕಡ್ಡಿ, ಮಣ್ಣು ಇತ್ಯಾದಿಗಳನ್ನು ಎಸೆದು ಪೀಡಿಸುತ್ತಿದ್ದರು. ಎಷ್ಟರವರೆಗೆಂದರೆ, ಇದನ್ನು ಸಹಿಸಲಾರದೆ ಪೈಗಂಬರರು ಮನೆಯಿಂದ ದೂರವಿರುವ ಒಂದು ಕಲ್ಲು ಬಂಡೆಯ ಗುಹೆಯೊಳಗೆ ಹೋಗಿ ನಮಾಜು ಮಾಡಲು ನಿರ್ಬಂಧಿತರಾದರು.

ಅದಾಗ್ಯೂ ಈ ಕ್ರೂರ ಅತ್ಯಾಚಾರಗಳು ವ್ಯರ್ಥವಾಗಲಿಲ್ಲ. ಸಭ್ಯರೂ ಸದ್ವೃತ್ತರೂ ಆದ ಜನರು ಇದನ್ನು ನೋಡಿ ಇಸ್ಲಾಮಿನೆಡೆ ಆಕರ್ಷಿತರಾಗುತ್ತಿದ್ದರು. ಒಂದು ದಿನ ಹಝ್ರತ್ ಮುಹಮ್ಮದ್ ಪೈಗಂಬರರು 'ಕಅಬಾ'ದ ಸಮೀಪವಿರುವ 'ಸಫಾ' ಎಂಬೊಂದು ಬೆಟ್ಟದಲ್ಲಿ ಕುಳಿತಿದ್ದರು. ಆಗ ಆ ದಾರಿಯಾಗಿ ಬರುತ್ತಿದ್ದ ಅವರ ಪರಮಶತ್ರುವೂ ಮಕ್ಕಾದ ಮುಂದಾಳೂ ಆದ ಅಬೂಜಹಲ್, ಪೈಗಂಬರರನ್ನು ನೋಡಿ ಅವಾಚ್ಯ ಶಬ್ದಗಳಿಂದ ಬಹಳವಾಗಿ ಬಯ್ಯಲು ತೊಡಗಿದ. ಪೈಗಂಬರರು ಬಯ್ಗುಳನ್ನೆಲ್ಲಾ ಕೇಳುತ್ತಾ ಏನೂ ಮರುಮಾತನಾಡದೆ ಬಹಳ ಸಂಯಮದಿಂದ ಅಲ್ಲಿಂದ ಎದ್ದು ತನ್ನ ಮನೆಯ ಕಡೆ ನಡೆದರು. ಅವರ ಕುಟುಂಬದಲ್ಲಿ ಸೇವಕಿಯಾಗಿದ್ದ ಒಬ್ಬಳು ದಾಸಿ ಇದನ್ನೆಲ್ಲಾ ನೋಡುತ್ತಿದ್ದಳು. ಹಂಝ ಎಂಬ ಹೆಸರಿನ ಪೈಗಂಬರರ ಚಿಕ್ಕಪ್ಪ ಬಹಳ ಪರಾಕ್ರಮಶಾಲಿಯೂ ಶೂರರೂ ಆಗಿದ್ದರು. ಅವರ ಪರಾಕ್ರಮದ ಕಾರಣ ಮಕ್ಕಾದ ಜನರೆಲ್ಲಾ ಅವರಿಗೆ ಹೆದರುತ್ತಿದ್ದರು. ಆ ದಿನ ಸಾಯಂಕಾಲ ಹಂಝ ಶಿಕಾರಿಯಿಂದ ಹಿಂದಿರುಗಿ ಬಂದವರು ಧನುಸ್ಸನ್ನು ಭುಜದಿಂದ ಇಳಿಸದೇ ಗರ್ವದಿಂದ ತನ್ನ ಮನೆಯೊಳಗೆ ಪ್ರವೇಶಿಸುತ್ತಿದ್ದರು. ಆ ದಿನ ಬೆಳಿಗ್ಗೆ ನಡೆದ ಘಟನೆಯಿಂದ ನೊಂದ ಕೆಲಸದಾಕೆಗೆ ಹಂಝರ ಠೀವಿಯನ್ನು

ನೋಡಿ ಸುಮ್ಮನಿರಲಾಗಲಿಲ್ಲ. ಅವಳು ಚುಚ್ಚುವ ಮಾತಿನಲ್ಲಿ ಅವರೊಡನೆ ಹೀಗೆಂದಳು: "ನೀವು ಬಹಳ ಗರ್ವದಿಂದ ಸದಾ ಶಸ್ತ್ರ ಸಜ್ಜಿತರಾಗಿ ತಿರುಗಾಡುತ್ತಿರುವಿರಿ. ಇಂದು ಬೆಳಿಗ್ಗೆ ಅಜೂಜಹಲ್ ನಿಮ್ಮ ಸೋದರ ಪುತ್ರ ನೊಡನೆ ಏನು ಅಪಚಾರವೆಸಗಿದನೆಂದು ನಿಮಗೆ ತಿಳಿದಿದಿಯೇ?" "ಏನು ಮಾಡಿದ ?" ಹಂಝಃ ಕೇಳಿದರು. ಆ ಪರಿಚಾರಿಕೆ ಅಂದು ಬೆಳಿಗ್ಗೆ ನಡೆದ ಘಟನೆಯನ್ನೆಲ್ಲಾ ಹಂಝರೊಡನೆ ವಿವರಿಸಿ ಹೇಳಿದಳು. ಹಂಝಃ ಒಬ್ಬ ಮುಸಲ್ಮಾನನಾಗಿರಲಿಲ್ಲ. ಆದರೂ ನಿರ್ಮಲ ಮನಸ್ಸಿನ ಒಬ್ಬ ಕುಲೀನ ವ್ಯಕ್ತಿಯಾಗಿದ್ದರು. ಇಸ್ಲಾಂ ಧರ್ಮದ ವಿಚಾರಗಳನ್ನು ಅವರು ಕೇಳಿದ್ದರು. ಆದರಿಂದ ಪ್ರಭಾವಿತರೂ ಆಗಿದ್ದರು. ಆದರೆ, ತನ್ನ ಸ್ವೇಚ್ಛಾ ವೃತ್ತಿಯಿಂದಾಗಿ ಇಸ್ಲಾಮಿನ ಸಂದೇಶದ ಕಡೆ ಸರಿಯಾಗಿ ಗಮನ ಹರಿಸಲು ಅವರಿಗೆ ಸಮಯಾವಕಾಶ ಲಭಿಸಿರಲಿಲ್ಲ. ಸೇವಕಿ ವಿವರಿಸಿದ ಸಂಭವವನ್ನು ಕೇಳಿ ಅವರ ಹೃದಯವು ಆವೇಶ ಭರಿತವಾಯಿತು. ಸಂದೇಹದ ಮರೆಯು ಮಾಯವಾಯಿತು. ಒಂದು ಅಮೂಲ್ಯ ವಸ್ತು ಕೈ ಬಿಟ್ಟು ಹೋಗುತ್ತಿರುವಂತೆ ಅವರಿಗೆ ಭಾಸವಾಗ ತೊಡಗಿತು. ಅವರು ತಕ್ಷಣವೇ ಮನೆಯಿಂದ ಹೊರಬಂದು 'ಕಅಬಾ'ದ ಕಡೆ ನಡೆದರು. 'ಕಅಬಾ' ದೇವಾಲಯವು ಮಕ್ಕಾದ ಸಾಮಂತರೂ ನೇತಾರರೂ ಸಭೆ ಸೇರಿ ವಿಚಾರ ವಿನಿಮಯ ನಡೆಸುವ ಒಂದು ಸ್ಥಳವಾಗಿತ್ತು. 'ಕಅಬಾ'ದಲ್ಲಿ ಬಂದವರೇ ಹಂಝಃ ತನ್ನ ಭುಜದ ಮೇಲಿಂದ ಧನುಸ್ಸನ್ನು ಕೆಳಗಿಳಿಸುತ್ತಾ ಅಬೂಜಹಲನ ಬೆನ್ನಿಗೆ ಒಂದೇಟು ಕೊಟ್ಟು "ನೋಡು, ನಾನು ಮುಹಮ್ಮದ್ (ಸ)ರವರ ಧರ್ಮವನ್ನು ಸ್ವೀಕರಿಸಿದ್ದೇನೆ. ಇಂದು ಪ್ರಾತಃ ಕಾಲ ಅವರನ್ನು ನೀನು ಬಹಳವಾಗಿ ಬಯ್ದು ಹಿಯ್ಯಾಳಿಸಿದ್ದಿಯಾ; ಯಾಕೆಂದರೆ, ಅವರು ನಿನ್ನ ಮಾತಿಗೆ ಏನೂ ಉತ್ತರಿಸುವುದಿಲ್ಲ. ನಿನಗೆ ಧೈರ್ಯವಿದ್ದರೆ ಈಗ ನನ್ನ ಏಟಿಗೆ ಉತ್ತರ ಕೊಡು" ಎಂದು ಗುಡುಗಿದರು.

ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ಅಜೂಜಹಲನಿಗೇ ದಿಗಿಲು ಬಡಿದಂತಾಯಿತು. ಅವನ ಕೆಲವು ಸಂಗಡಿಗರು ಹಂಝರೊಡನೆ ಹೋರಾಟಕ್ಕೆ ಸಿದ್ಧರಾದರು. ಆದರೆ, ಹಂಝರವರ ಶೌರ್ಯ, ಪರಾಕ್ರಮ ಮತ್ತು ಅವರ ಗೋತ್ರ ಸಾಮರ್ಥ್ಯವನ್ನು ಚೆನ್ನಾಗಿ ಬಲ್ಲ ಅಜೂಜಹಲ್‌ನಿಗೆ ಹೋರಾಟ ಅಪಾಯಕಾರಿಯೆಂದು ಮನವರಿಕೆಯಾಯಿತು. ಉಪಾಯದಿಂದ ಹಿಂಜರಿಯಲು ತೀರ್ಮಾನಿಸಿ, "ಹೋಗಲಿ ಬಿಡಿ, ನಿಜವಾಗಿಯೂ ನಾನು ಇಂದು ಬೆಳಿಗ್ಗೆ ಅವರ ಸಹೋದರರನ ಮಗನನ್ನು ತುಂಬಾ ಹಿಯ್ಯಾಳಿಸಿರುವೆನು." ಎಂದು ಹೇಳುತ್ತಾ ತನ್ನ ಸಂಗಡಿಗರನ್ನು ಅಬೂಜಹಲ್ ತಡೆದನು. (ಇಬ್ನುಹಿಶಾಮ್, ತಬರೀ)

## ಇಸ್ಲಾಮಿನ ಸಂದೇಶ

ವಿರೋಧವು ಊರ್ಜಿತಗೊಳ್ಳುತ್ತಲೇ ಇತ್ತು. ಅದೇ ವೇಳೆ ಇತ್ತ ಮುಹಮ್ಮದ್ ಪೈಗಂಬರರು ಮತ್ತು ಅವರ ಅನುಯಾಯಿಗಳು ಇಸ್ಲಾಂ ಧರ್ಮದ ದಿವ್ಯ ಸಂದೇಶವನ್ನು ಮಕ್ಕಾದ ಜನರಿಗೆ ಬೋಧಿಸುತ್ತಲೇ ಇದ್ದರು. ಅತ್ಯಂತ ಮಹತ್ವ ಪೂರ್ಣವಾದ ಆ ಸಂದೇಶವು ಅರೇಬ್ಯಾದ ಜನರಿಗೆ ಮಾತ್ರ ಸೀಮಿತವಾಗಿರದೆ, ಸಮಸ್ತ ಜಗತ್ತಿಗೇ ಅನ್ವಯಿಸುವ ದೈವಿಕ ಸಂದೇಶವಾಗಿತ್ತು. ಅವರು ಈ ರೀತಿ ಪ್ರಬೋಧಿಸಿದರು :

ಈ ಬ್ರಹ್ಮಾಂಡವನ್ನು ಸೃಷ್ಟಿಸಿದ ಪರಮಾತ್ಮನು ಒಬ್ಬನೇ ಆಗಿರುವನು. ಆ ಏಕ ದೇವರ ಹೊರತು ಆರಾಧನೆಗೆ ಅರ್ಹರಾಗಿ ಇನ್ನಾರೂ ಇರುವುದಿಲ್ಲ. ಎಷ್ಟೆಲ್ಲಾ ಪ್ರವಾದಿಗಳೂ ಋಷಿ, ಮುನಿ, ಅವತಾರ ಪುರುಷರು ಈ ಲೋಕದಲ್ಲಿ ಜನ್ಮತಾಳಿರುವರೋ ಅವರೆಲ್ಲಾ ಆ ಅದ್ವೈತ ಪರಮಾತ್ಮನಲ್ಲಿ ನಂಬಿಕೆಯಿದ್ದವರೂ ಅವನ ಏಕತೆಯನ್ನು ಘೋಷಿಸಿದವರೂ ಆಗಿದ್ದರು. ಇದೇ ಸತ್ಯವನ್ನು ಅವರು ಆಯಾ ಕಾಲದ ಜನರಿಗೆ ಬೋಧಿಸಿದರು. ನೀವು ಆ ಒಬ್ಬನೇ ಪರಮಾತ್ಮನಲ್ಲಿ ನಂಬಿಕೆಯಿಡಿರಿ. ಈ ಮಣ್ಣಿನ ವಿಗ್ರಹಗಳನ್ನೆಲ್ಲಾ ತ್ಯಜಿಸಿರಿ. ಯಾಕೆಂದರೆ, ಅವು ಸರ್ವಥಾ ವ್ಯರ್ಥವೂ ನಿಸ್ಸಾರವೂ ಆಗಿವೆ. ಅವುಗಳಿಗೆ ಯಾವ ರೀತಿಯ ಶಕ್ತಿ ಸಾಮರ್ಥ್ಯವೂ ಇರುವುದಿಲ್ಲ. ಎಲೈ ಮಕ್ಕಾದ ಜನರೇ, ಈ ವಿಗ್ರಹಗಳ ಮುಂದೆ ಇರಿಸಲ್ಪಟ್ಟ ನೈವೇದ್ಯಗಳಲ್ಲಿ ಬಂದು ಕೂತ ನೊಣಗಳನ್ನು ಓಡಿಸುವಷ್ಟು ಸಹ ಅವುಗಳಲ್ಲಿ ಸಾಮರ್ಥ್ಯವಿಲ್ಲವೆಂಬುದನ್ನು ನೀವು ನೋಡುತ್ತಿಲ್ಲವೇ? ಅವುಗಳ ಮೇಲೆ ಯಾರಾದರೂ ಹಲ್ಲೆ ನಡೆಸಿದರೂ ಸ್ವಯಂ ರಕ್ಷಣೆ ಹೊಂದುವ ಶಕ್ತಿಯೂ ಕೂಡ ಅವುಗಳಿಗಿಲ್ಲ. ಯಾರಾದರೂ ಅವುಗಳೊಡನೆ ಏನಾದರೂ ಪ್ರಶ್ನೆ ಕೇಳಿದರೆ ಅವು ಉತ್ತರಿಸುವುದಿಲ್ಲ. ಯಾರಾದರೂ ಸಹಾಯ ಕೇಳಿದರೆ ಅವುಗಳಿಂದ ಸಹಾಯ ಲಭಿಸುವುದಿಲ್ಲ. ಆದರೆ, ಸೃಷ್ಟಿಕರ್ತನಾದ ಆ ಏಕ

ಪರಮಾತ್ಮನು ಸಹಾಯ ಯಾಚಿಸುವವರ ಆವಶ್ಯಕತೆಗಳನ್ನು ಈಡೇರಿಸಿಕೊಡುತ್ತಾನೆ. ಭಕ್ತ ಜನರ ಪ್ರಾರ್ಥನೆಗಳನ್ನು ಕೇಳಿ ಅವುಗಳಿಗೆ ಉಚಿತ ಉತ್ತರ ನೀಡುತ್ತಾನೆ. ನೆರವು ಕೇಳುವವರಿಗೆ ನೆರವು ನೀಡುತ್ತಾನೆ. ಸತ್ಯದ ವಿರೋಧಿಗಳನ್ನು ದಮನಗೊಳಿಸಿ ತನ್ನ ಉಪಾಸಕರಿಗೆ ಅಭಿವೃದ್ಧಿಯನ್ನೂ ವಿಜಯವನ್ನೂ ದಯಪಾಲಿಸುತ್ತಾನೆ. ಅವನಿಂದ ಬರುವ ದಿವ್ಯ ಪ್ರಕಾಶವು ಅವನ ಭಕ್ತರ ಹೃದಯಗಳನ್ನು ಪುಳಕಿತಗೊಳಿಸುತ್ತದೆ. ಅಂತಹ ಪರಮೇಶ್ವರನನ್ನು ಬಿಟ್ಟು ನೀವು ಯಾತಕ್ಕಾಗಿ ಈ ನಿರ್ಜೀವ ಮೂರ್ತಿಗಳ ಮುಂದೆ ತಲೆಬಾಗಿ ನಿಮ್ಮ ಜೀವನವನ್ನು ವ್ಯರ್ಥಗೊಳಿಸುತ್ತೀರಿ? ಏಕ ದೇವನಲ್ಲಿರುವ ಆ ಪವಿತ್ರ ವಿಶ್ವಾಸದ ಅಭಾವದಿಂದಾಗಿ ನಿಮ್ಮ ಅಂತಃಕರಣವು ಕಲುಷಿತವಾಗಿದೆಯಲ್ಲದೆ ನಿಮ್ಮಲ್ಲಿ ನಿರರ್ಥಕ ಕಟ್ಟುಕಥೆಗಳೂ ಮೂಢ ವಿಶ್ವಾಸಗಳೂ ಬೆಳೆದು ಬಂದಿವೆ. ನೀವು ನಾನಾ ರೀತಿಯ ದುರಾಚಾರಗಳಿಗೆ ಬಲಿಯಾಗಿರುವಿರಿ. ಯಾವುದು ಉಚಿತ ಯಾವುದು ಅನುಚಿತವೆಂಬುದು ನಿಮಗೆ ತಿಳಿಯುವುದಿಲ್ಲ. ನಿಷಿದ್ಧ-ಅನಿಷಿದ್ಧಗಳಲ್ಲಿ ನೀವು ವ್ಯತ್ಯಾಸ ಕಾಣುವುದಿಲ್ಲ. ಒಳ್ಳೆಯದರ ಕೆಟ್ಟದರ ಮಧ್ಯೆ ನಿಮಗೆ ಭೇದವಿಲ್ಲ. ನಿಮ್ಮ ಮಾತೆಯರನ್ನು ನೀವು ಅಪಮಾನಿಸುತ್ತೀರಿ. ನಿಮ್ಮ ಸಹೋದರಿಯರಿಗೂ ಪುತ್ರಿಯರಿಗೂ ಸಲ್ಲತಕ್ಕ ಹಕ್ಕುಗಳನ್ನು ನೀಡದೆ ಅವರೊಡನೆ ನೀವು ದೌರ್ಜನ್ಯವೆಸಗುತ್ತೀರಿ. ನಿಮ್ಮ ಪತ್ನಿಯರೊಡನೆ ನಿಮ್ಮ ನಡವಳಿಕೆ ಉತ್ತಮವಿಲ್ಲ. ಅನಾಥರ ಹಕ್ಕನ್ನು ನೀವು ಕಬಳಿಸುತ್ತೀರಿ. ವಿಧವೆಯರೊಡನೆ ನೀಚವಾಗಿ ವರ್ತಿಸುತ್ತೀರಿ. ಬಡವರನ್ನೂ ಬಲಹೀನರನ್ನೂ ನೀವು ಹಿಂಸಿಸುತ್ತೀರಿ. ಅನ್ಯರ ಮೇಲೆ ದಬ್ಬಾಳಿಕೆ ನಡೆಸುವುದೇ ನಿಮ್ಮ ದೊಡ್ಡಸ್ತಿಕೆಯೆಂದು ನೀವು ತಿಳಿದಿರುವಿರಿ. ಸುಳ್ಳು, ವಂಚನೆಗಳಲ್ಲಿ ನಿಮಗೆ ಹೇಸಿಕೆಯಿಲ್ಲ. ಕಳ್ಳತನ, ಮೋಸ, ದರೋಡೆ ಮೊದಲಾದವುಗಳಿಗೆ ನೀವು ನಾಚುವವರಲ್ಲ. ಜೂಜಾಟ ಮತ್ತು ಮದ್ಯಪಾನ ನಿಮ್ಮ ನಿತ್ಯಚರ್ಯೆಗಳಾಗಿವೆ. ವಿದ್ಯಾರ್ಜನೆ, ಸಮಾಜ ಸೇವೆಯ ಕಡೆ ನಿಮಗೆ ಗಮನವೇ ಇಲ್ಲ. ಏಕ ಸತ್ಯ ಪರಮಾತ್ಮನಿಂದ ಬೇರ್ಪಟ್ಟು ಎಷ್ಟರ ತನಕ ಮುಂದುವರಿಯುವಿರಿ? ಬನ್ನಿ, ನಿಮ್ಮ ಸುಧಾರಣೆ ಮಾಡಿಕೊಳ್ಳಿರಿ. ಅಕ್ರಮ, ಅತ್ಯಾಚಾರಗಳನ್ನು ತ್ಯಜಿಸಿರಿ. ಇತರರ ಹಕ್ಕುಗಳನ್ನು ಅವರಿಗೆ ಹಿಂದಕ್ಕೆ ಕೊಡಿರಿ. ದೇವರು ನಿಮಗೆ ಐಶ್ವರ್ಯವನ್ನು ದಯಪಾಲಿಸಿದ್ದರೆ ಅದರಿಂದ ದೇಶ ಮತ್ತು ಸಮಾಜದ ಏಳಿಗೆಗಾಗಿ ಖರ್ಚುಮಾಡಿರಿ. ದುರ್ಬಲರಿಗೂ ದರಿದ್ರರಿಗೂ ಅದರಿಂದ ಸಹಾಯ ನೀಡಿರಿ. ಸ್ತ್ರೀಯರನ್ನು ಗೌರವಿಸಿರಿ. ಅವರ ಹಕ್ಕುಗಳನ್ನು ತಡೆಹಿಡಿಯದಿರಿ. ಅನಾಥರನ್ನು ದೇವರ ಅಮಾನತ್ತು ಎಂದು ತಿಳಿದು ಅವರನ್ನು ಸಂರಕ್ಷಿಸುವುದು ಅತ್ಯುತ್ತಮವಾದ ಸತ್ಕರ್ಮವೆಂದು ಭಾವಿಸಿರಿ. ವಿಧವೆಯರೊಡನೆ ಸಹಾನುಭೂತಿಯಿಂದ ವರ್ತಿಸಿರಿ. ಸದ್ಗುಣಗಳನ್ನೂ ದೈವಭಕ್ತಿಯನ್ನೂ ಬೆಳೆಸಿರಿ. ನ್ಯಾಯ, ನೀತಿ ಮಾತ್ರವೇ ಅಲ್ಲ, ದಯೆ ಮತ್ತು ಪರೋಪಕಾರಗಳ ಶೀಲವನ್ನು ಬೆಳೆಸಿರಿ. ಈ ಪ್ರಪಂಚಕ್ಕೆ ನಿಮ್ಮ ಬರುವಿಕೆಯು ನಿಷ್ಫಲವಾಗಬಾರದು. ಮುಂದಿನ ಪೀಳಿಗೆಗೆ ಮಾದರಿಯಾಗಬಲ್ಲಂತಹ ಉತ್ತಮ ನಡವಳಿಕೆಗಳನ್ನು ನಿಮ್ಮ ಹಿಂದೆ ಬಿಟ್ಟುಹೋಗಿರಿ. ಅದರಿಂದ ನಿಮ್ಮ ಮೂಲಕ ಶಾಶ್ವತವಾದ ಸತ್ಕರ್ಮಕ್ಕೆ ಬೀಜಾರೋಪವಾದಂತಾಗಲಿ. ನಿಮ್ಮ ಹಕ್ಕುಗಳನ್ನು ನೀವು ಗಳಿಸಿಕೊಳ್ಳುವುದರಲ್ಲಿ ದೊಡ್ಡಸ್ತಿಕೆಯಿಲ್ಲ. ಇತರರಿಗಾಗಿ ತ್ಯಾಗ ಬಲಿದಾನಗಳನ್ನರ್ಪಿಸುವುದೇ ನಿಜವಾದ ಘನತೆಯಾಗಿದೆ. ಆದುದರಿಂದ ಎಲೈ ಜನರೇ, ನೀವು ಔದಾರ್ಯಮಯ ಜೀವನವನ್ನು ನಡೆಸಿರಿ. ತ್ಯಾಗ ಬಲಿದಾನಗಳಿಂದ ಪರಮಾತ್ಮನ ಸಾಮೀಪ್ಯವನ್ನು ಗಳಿಸಿರಿ. ದೇವರ ಸನ್ನಿಧಿಯಲ್ಲಿ ನಿಮಗೆ ಉನ್ನತ ಸ್ಥಾನ ಮಾನಗಳು ಲಭಿಸುವಂತಾಗಲಿ. ನಿಶ್ಚಯವಾಗಿಯೂ ನಾವು ಇಂದು ದುರ್ಬಲರಾಗಿದ್ದೇವೆ ಆದರೆ, ನಮ್ಮ ದೌರ್ಬಲ್ಯವನ್ನು ನೋಡದಿರಿ. ಸತ್ಯಕ್ಕೆ ಶಾಶ್ವತ ವಿಜಯವು ನಿಶ್ಚಯಿಸಲ್ಪಟ್ಟಿದೆ. ಇದು ಪರಮಾತ್ಮನ ತೀರ್ಮಾನವಾಗಿದೆ. ಮುಹಮ್ಮದ್ ಪೈಗಂಬರರ ಮೂಲಕ ಈಗ ನ್ಯಾಯದ ಒಂದು ತಕ್ಕಡಿಯು ಹಿಡಿಯಲ್ಪಟ್ಟಿದೆ. ಅದರಿಂದ ಸತ್ಯ ಧರ್ಮದ ಸಾಮ್ರಾಜ್ಯವು ಸ್ಥಾಪನೆಯಾಗಲಿದೆ. ಯಾರಿಗೂ ಅನ್ಯಾಯವಾಗದು. ಧಾರ್ಮಿಕ ವಿಷಯಗಳಲ್ಲಿ ಯಾರೊಡನೆಯೂ ಬಲವಂತ ಹೇರಲಾರದು. ಸ್ತ್ರೀಯರಿಗೂ ದುರ್ಬಲರಿಗೂ ಗುಲಾಮರಿಗೂ ಆಗುತ್ತಿರುವ ಅನ್ಯಾಯವನ್ನು ನಿಲ್ಲಿಸಲಾಗುವುದು. ಪೈಶಾಚಿಕ ಆಡಳಿತಕ್ಕೆ ಬದಲಾಗಿ ಏಕ ಪರಮಾತ್ಮನ ಆಡಳಿತಾಧಿಕಾರವು ಜಾರಿಗೆ ಬರುವುದು."

### ಅಬೂತಾಲಿಬರ ಬಳಿಗೆ ವಿರೋಧಿ ನೇತಾರರ ನಿಯೋಗ

ಇಸ್ಲಾಮಿನ ಈ ದಿವ್ಯ ಸಂದೇಶವು ಮಕ್ಕಾ ನಿವಾಸಿ

ಗಳಿಗೆ ನಿರಂತರ ಪ್ರಬೋಧಿಸಲ್ಪಟ್ಟಾಗ ಅವರಲ್ಲಿ ಸಜ್ಜನರೂ ಚಿಂತಾಶೀಲರೂ ಆದವರು ಇಸ್ಲಾಮಿನೆಡೆ ಆಕೃಷ್ಟರಾಗುತ್ತಿದ್ದರು. ಇದರಿಂದ ಕುಪಿತರಾದ ಮಕ್ಕಾದ ಪ್ರಮುಖರೂ ಮುಂದಾಳುಗಳೂ ಒಟ್ಟು ಸೇರಿ ಒಂದು ದಿನ ಪೈಗಂಬರರ ಚಿಕ್ಕಪ್ಪ ಅಬೂತಾಲಿಬ್‌ರವರ ಬಳಿಗೆ ಬಂದು ಈ ರೀತಿ ನಿವೇದಿಸಿಕೊಂಡರು: "ನೀವು ನಮ್ಮ ನೇತಾರರಲ್ಲೊಬ್ಬರಾಗಿರುವ ಕಾರಣ ನಿಮಗೋಸ್ಕರವಾಗಿ ನಾವು ಇದು ವರೆಗೂ ಮುಹಮ್ಮದನನ್ನು ಏನೂ ಹೇಳದೆ ಸುಮ್ಮನೆ ಬಿಟ್ಟಿದ್ದೇವೆ. ಈಗ ನಿಮ್ಮೊಂದಿಗೆ ನಾವು ಕೊನೆಯ ತೀರ್ಮಾನ ಮಾಡಿಕೊಂಡು ಈ ಗಂಡಾಂತರವನ್ನು ಅಂತ್ಯಗೊಳಿಸಬೇಕಾದ ಸಮಯ ಸನ್ನಿಹಿತವಾಗಿದೆ. ನೀವು ಆತನನ್ನು ಸಮಜಾಯಿಸಿಕೊಂಡು ಕೇಳಿರಿ. ನಿಜವಾಗಿಯೂ ಆತನಿಗೆ ನಮ್ಮಿಂದ ಏನು ಆಗಬೇಕಾಗಿದೆ? ಸಮಾಜದಲ್ಲಿ ಪ್ರತಿಷ್ಠೆಯನ್ನು ಗಳಿಸಬೇಕೆಂಬುದು ಅವನ ಇಚ್ಛೆಯಾಗಿದ್ದಲ್ಲಿ, ನಾವು ಅವನನ್ನು ನಮ್ಮ ಸರ್ವೋನ್ನತ ನೇತಾರನಾಗಿ ಅಂಗೀಕರಿಸಲು ತಯಾರಿದ್ದೇವೆ. ಅಥವಾ ಅವನು ಸಿರಿವಂತನಾಗುವ ಅಭಿಲಾಷಿಯಾಗಿದ್ದರೆ, ನಮ್ಮಲ್ಲಿ ಎಲ್ಲರೂ ತಮ್ಮ ಸಂಪತ್ತಿನ ಒಂದಂಶವನ್ನು ಮುಹಮ್ಮದನಿಗೆ ನೀಡಲು ತಯಾರಿದ್ದೇವೆ. ಇಲ್ಲ, ವಿವಾಹ ಮಾಡಿಕೊಳ್ಳಲು ಅವನು ಬಯಸುತ್ತಿದ್ದರೆ, ಮಕ್ಕಾದಲ್ಲಿ ಅವನು ಇಚ್ಛಿಸುವ ಯಾವುದೇ ಯುವತಿಯ ಹೆಸರನ್ನು ಸೂಚಿಸಲಿ, ನಾವು ಅವಳೊಂದಿಗೆ ಅವನ ವಿವಾಹವನ್ನು ನೆರವೇರಿಸಿಕೊಡಲು ಸಿದ್ಧರಿದ್ದೇವೆ. ಇದಕ್ಕೆಲ್ಲಾ ಅವನಿಂದ ನಾವು ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ಅವನಿಗೆ ಯಾವುದನ್ನೂ ನಾವು ತಡೆಯುವುದೂ ಇಲ್ಲ. ಆದರೆ, ನಮ್ಮ ದೇವತಾ ವಿಗ್ರಹಗಳ ವಿರೋಧವಾಗಿ ಹೇಳುವುದನ್ನು ಮಾತ್ರ ಅವನು ಕೈಬಿಡಬೇಕು. ದೇವರು ಒಬ್ಬನೇ ಎಂದು ಅವನು ಹೇಳುವುದರಲ್ಲಿ ನಮಗೆ ಆಕ್ಷೇಪವಿಲ್ಲ. ಆದರೆ, ವಿಗ್ರಹಗಳ ವಿರುದ್ಧ ಮಾತ್ರ ಅವನು ಹೇಳಬಾರದು. ಇಷ್ಟನ್ನು ಅವನು ಒಪ್ಪುವುದಿದ್ದರೆ ನಮಗೆ ಅವನೊಡನೆ ಮೈತ್ರಿಯಿಂದಿರಲು ಸಾಧ್ಯವಿದೆ. ನೀವು ಅವನಿಗೆ ತಿಳಿವಳಿಕೆ ಹೇಳಿಕೊಟ್ಟು, ನಮ್ಮ ಈ ವಿಜ್ಞಾಪನೆಯನ್ನು ಸ್ವೀಕರಿಸುವಂತೆ ಆತನ ಮನವೊಲಿಸಿರಿ. ಇಲ್ಲವೆಂದಾದರೆ ಎರಡರಲ್ಲಿ ಒಂದು ಖಂಡಿತವಾಗಿಯೂ ಸಂಭವಿಸುವುದು. ಒಂದೋ ನೀವು ನಿಮ್ಮ ಸೋದರ ಪುತ್ರನನ್ನು ತ್ಯಜಿಸಬೇಕಾಗುವುದು. ಅಲ್ಲವಾದರೆ, ನಿಮ್ಮ ಸಮುದಾಯವು ನಿಮ್ಮ ನೇತೃತ್ವವನ್ನು ತಿರಸ್ಕರಿಸಿ ನಿಮ್ಮಿಂದ ದೂರವಾಗುವುದು!"

ಅಬೂತಾಲಿಬರಿಗೆ ಈ ಮಾತುಗಳು ಕರ್ಣ ಕಠೋರವಾಗಿದ್ದುವು. ಅಂದು ಅರೇಬಿಯನರ ಬಳಿ ಸಿರಿ–ಸಂಪತ್ತು ವಿಶೇಷವಾಗಿರಲಿಲ್ಲ. ಸಮೂಹದ ನಾಯಕತ್ವವೇ ಅವರ ಸಕಲ ಪ್ರಖ್ಯಾತಿಯೂ ಗೌರವವೂ ಆಗಿರುತ್ತಿತ್ತು. ಗೋತ್ರ ನಾಯಕರು ಆಯಾ ಗೋತ್ರದ ಜನರಿಗಾಗಿ ಜೀವಿಸುತ್ತಿದ್ದರು. ಅಂತೆಯೇ ಜನರು ಅವರ ನಾಯಕರಿಗಾಗಿ ಬದುಕುತ್ತಿದ್ದರು. ಈ ಮಾತುಗಳಿಂದ ಅತಿಯಾಗಿ ತಳಮಳಗೊಂಡ ಅಬೂತಾಲಿಬ್ ಪೈಗಂಬರರನ್ನು ತನ್ನ ಬಳಿಗೆ ಬರಮಾಡಿಕೊಂಡು ತನ್ನ ಸಮುದಾಯದ ಪ್ರತಿನಿಧಿಗಳು ಸೂಚಿಸಿದ ನಿವೇದನೆಯನ್ನು ಅವರಿಗೆ ವಿವರವಾಗಿ ತಿಳಿಸಿದರು. ಆ ನಂತರ ಗದ್ಗದ ಕಂಠರಾಗಿ ಹೀಗೆಂದರು– "ಕಂದಾ, ನನ್ನ ಜನರು ನನ್ನೊಡನೆ ಈ ವಿಷಯವನ್ನು ತಿಳಿಸುವುದರ ಜೊತೆಗೇ ಒಂದು ಎಚ್ಚರಿಕೆಯನ್ನೂ ನೀಡಿದ್ದಾರೆ. ಅದೇನೆಂದರೆ, ನಿಮ್ಮ ಸಹೋದರ ಪುತ್ರನು ಇದಾವುದಕ್ಕೂ ಒಪ್ಪದೆ ಹೋದಲ್ಲಿ ನೀವು ಆತನನ್ನು ತೊರೆಯಬೇಕಾಗುವುದು. ಇಲ್ಲವೇ ನಿಮ್ಮ ಸಮುದಾಯವು ನಿಮ್ಮನ್ನು ತೊರೆದು ಬಿಡುತ್ತದೆ."

ಈ ಮಾತುಗಳನ್ನು ಹೇಳುತ್ತಿದ್ದಾಗ ಅಬೂತಾಲಿಬರ ಕಣ್ಣುಗಳು ತುಂಬಿ ಬಂದುವು. ತನ್ನ ಚಿಕ್ಕಪ್ಪನೊಡನಿರುವ ಸಹಾನುಭೂತಿಯ ಸ್ಪಷ್ಟ ನಿದರ್ಶನವೆಂಬಂತೆ ಪೈಗಂಬರರ ಕಣ್ಣುಗಳೂ ಕಣ್ಣೀರಿನಿಂದ ತುಂಬಿದವು. ಅವರು ಈ ರೀತಿ ಉತ್ತರಿಸಿದರು:

> "ಚಿಕ್ಕಪ್ಪಾ, ನಿಮ್ಮ ಜನರನ್ನು ನೀವು ಬಿಟ್ಟುಬಿಡಬೇಕೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ಅವರನ್ನು ತ್ಯಜಿಸಿ ಬಿಟ್ಟು ನನ್ನ ಜೊತೆ ಸೇರಿ ನನಗೆ ಸಹಾಯ ನೀಡಿರೆಂದೂ ನಾನು ನಿಮ್ಮೊಡನೆ ಅಪೇಕ್ಷಿಸುವುದಿಲ್ಲ. ಖಂಡಿತವಾಗಿಯೂ ನೀವು ನನ್ನನ್ನು ಉಪೇಕ್ಷಿಸಿಕೊಂಡು ನಿಮ್ಮ ಜನರೊಂದಿಗೆ ಸೇರಿಕೊಳ್ಳಬಹುದು. ಆದರೆ ಜಗತ್ಪಾಲಕನಾದ ಆ ಏಕ ಪರಮಾತ್ಮನ ಆಣೆ, ನಿಶ್ಚಯವಾಗಿ ಅವರು ನನ್ನ ಬಲ ಬದಿಯಲ್ಲಿ ಸೂರ್ಯನನ್ನೂ ಎಡ ಬದಿಯಲ್ಲಿ ಚಂದ್ರನನ್ನೂ ತಂದಿರಿಸಿದರೂ ಸಹ ಪರಮಾತ್ಮನ ಏಕತೆಯ ಕುರಿತು ಪ್ರಬೋಧಿಸುವುದನ್ನು

# ★ ಅಹ್ಮದಿಯಾ ವಾರ್ತೆಗಳು ★

## ಸ್ಪೆಯಿನಿನಲ್ಲಿ ಬಿಶಾರತ್ ಮಸೀದಿ ಉದ್ಘಾಟನೆ

ಕಳೆದ ಸಪ್ಟೆಂಬರ್ 10ರಂದು (ಶುಕ್ರವಾರ) ಅಹ್ಮದಿಯಾ ಜಮಾಅತಿನ ವತಿಯಿಂದ ಸುಮಾರು 700 ವರ್ಷಗಳ ಬಳಿಕ ಸ್ಪೆಯಿನಿನಲ್ಲಿ ಮೊತ್ತ ಮೊದಲಿಗೆ ನಿರ್ಮಿಸಲಾದ ಇತಿಹಾಸ ಪ್ರಾಧಾನ್ಯವುಳ್ಳ ಬಿಶಾರತ್ ಮಸೀದಿಯನ್ನು ಅಹ್ಮದಿಯಾಜಮಾಅತಿನ ಆಧ್ಯಾತ್ಮಿಕ ಸರ್ವೋನ್ನತ ನೇತಾರ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ (ಚತುರ್ಥ ಅಹ್ಮದಿಯಾ ಖಲೀಫ) ಉದ್ಘಾಟಿಸಿದರು.

700 ವರ್ಷಗಳ ಸುದೀರ್ಘ ಅಂತರದ ಬಳಿಕ ಮುಸ್ಲಿಮರ ಧಾರ್ಮಿಕ ಸಮಾರಂಭವೊಂದರಲ್ಲಿ ಸ್ಪೆಯಿನಿನ ನಿವಾಸಿಗಳು ಅಸಾಮಾನ್ಯ ಆಸಕ್ತಿ ಪ್ರದರ್ಶಿಸಿದ ಮೊದಲಿನ ಸಂದರ್ಭ ಸಹ ಇದೇ ಆಗಿತು. ಏಷ್ಯಾ, ಆಫ್ರಿಕ, ಯುರೋಪ್, ಅಮೇರಿಕ ಮುಂತಾದ ಭೂಖಂಡಗಳ ವಿವಿಧ ದೇಶಗಳಿಂದ ಸ್ಪೆಯಿನಿನಲ್ಲಿ ಬಂದು ಸೇರಿದ ಅಹ್ಮದೀ ಮುಸ್ಲಿಮರೊಂದಿಗೆ ಕುತೂಹಲ ಚಿತ್ತರಾಗಿ ಅವರು ಈ ಸಮಾರಂಭದಲ್ಲಿ ಭಾಗವಹಿಸಿದರು.

ಉದ್ಘಾಟನೆಗೆ ಮೊದಲು ನಡೆದ ಜುಮಾ ಪ್ರಾರ್ಥನೆಯಲ್ಲಿ ಜಗತ್ತಿನ ನಾನಾ ಕಡೆಗಳಿಂದ ಆಗಮಿಸಿದ ಸುಮಾರು ಎರಡು ಸಾವಿರ ಅಹ್ಮದೀ ಮುಸ್ಲಿಮರು ಪಾಲುಗೊಂಡರು.

ಸಾಯಂಕಾಲ 7 ಗಂಟೆಗೆ ಸರಿಯಾಗಿ ಮಸೀದಿಯ ಉದ್ಘಾಟನಾ ಕಾರ್ಯಕ್ರಮ ಆರಂಭವಾಯಿತು. ಮಸೀದಿಯ ವಿಶಾಲವಾದ ಅಂಗಣ ಜನನಿಬಿಡವಾಗಿತ್ತು. ಹೊರದೇಶಗಳಿಂದ ಬಂದ ಎರಡು ಸಾವಿರ ಅಹ್ಮದೀ ಮುಸ್ಲಿಮರೂ ಸುಮಾರು ಮೂರು ಸಾವಿರ ಸ್ಪೈನ್ ನಿವಾಸಿಗಳೂ ಸಮಾರಂಭದಲ್ಲಿ ಪಾಲ್ಗೊಂಡರು.

ಹಝ್ರತ್ ಖಲೀಫತುಲ್ ಮಸೀಹ್ ತನ್ನ ಉದ್ಘಾಟನಾ ಭಾಷಣದಲ್ಲಿ ಮನುಷ್ಯನ ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯಲ್ಲೂ ಸಮತ್ವದಲ್ಲೂ ನೀತಿ ನ್ಯಾಯದಲ್ಲೂ ಅಧಿಷ್ಠಿತವಾದ ಅಂತರ್ದೇಶೀಯವಾದೊಂದು ವ್ಯವಸ್ಥೆಯನ್ನು ಇಸ್ಲಾಂ ಲೋಕಕ್ಕೆ ಕಾಣಿಕೆಯಿತ್ತಿದೆಯೆಂದು ಹೇಳಿದರು. ಪ್ರೀತಿ ಮತ್ತು ಸೋದರ್ಯ ಮೂಲಕ ಮಾನವ ಹೃದಯಗಳನ್ನು ಗೆಲ್ಲಬಹುದೆಂದು ಇಸ್ಲಾಂ ಕಲಿಸುತ್ತದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಕೈಗೊಂಡ ಮಾರ್ಗ ಸಹ ಇದೇ ಆಗಿದೆಯೆಂದು ಅವರು ಪ್ರಸ್ತಾಪಿಸಿದರು.

ಹೇಗ್‌ನಲ್ಲಿರುವ ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್, ನೋಬೆಲ್ ಬಹುಮಾನ ವಿಜೇತ ಪ್ರೊಫೆಸರ್ ಅಬ್ದುಸ್ಸಲಾಂ, ಸ್ಪೈನ್ ಅಹ್ಮದಿಯಾ ಮಿಶನರಿ ಮೌಲಾನಾ ಕರಂ ಇಲಾಹಿ ಝಫರ್ ಮುಂತಾದವರು ಸಹ ಭಾಷಣ

---

( 20ನೇ ಪುಟದಿಂದ)

ನಾನು ನಿಲ್ಲಿಸಲಾರೆ. ಆ ದೇವರು ನನಗೆ ಮರಣವನ್ನು ಕೊಡುವ ಪರ್ಯಂತ ಈ ಕೆಲಸದಲ್ಲಿ ನಾನು ಮುಂದುವರಿಯುವೆನು. ತಾವು ತಮಗೆ ಇಷ್ಟವಾದ ಮಾರ್ಗವನ್ನು ಸ್ವೀಕರಿಸಿಕೊಳ್ಳಬಹುದು."

ಸುದೃಢವೂ ಪ್ರಾಮಾಣಿಕವೂ ಆದ ಈ ಉತ್ತರವು ಅಬೂತಾಲಿಬರ ಕಣ್ಣುಗಳನ್ನು ತೆರೆಯಲು ಪರ್ಯಾಪ್ತವಾಗಿತ್ತು. ಅವರು ಯೋಚನಾಮಗ್ನರಾದರು: ನನಗಂತೂ ವಿಶ್ವಾಸ ಹೊಂದುವ ಸೌಭಾಗ್ಯ ಲಭಿಸಲಿಲ್ಲ. ಆದರೂ, ಅಚಲಿತವಾದ ಈ ವಿಶ್ವಾಸ ಪ್ರದರ್ಶನದ ಸನ್ನಿವೇಶವನ್ನು ಕಾಣಲು ಸಾಧ್ಯವಾದುದೇ ಅತಿ ಮಹತ್ತಾದ ಸಂಪತ್ತಾಗಿದೆ. ಪೈಗಂಬರರ ಕಡೆ ತಿರುಗಿ ಅವರು ಈ ರೀತಿ ಹೇಳಿದರು: "ಸಹೋದರ ಪುತ್ರಾ, ನೀನು ಹೋಗಿ ನಿನ್ನ ಕರ್ತವ್ಯದಲ್ಲಿ ನಿರತನಾಗು. ನನ್ನ ಜನತೆಯು ನನ್ನನ್ನು ಬಿಡುವರೆಂದಾದರೆ ಬಿಟ್ಟು ಬಿಡಲಿ. ನಾನಂತೂ ನಿನ್ನನ್ನು ಬಿಡಲಾರೆ." (ಇಬ್ನು ಹಿಶಾಮ್) □

**(ಸಶೇಷ)**

ಮಾಡಿದರು. ಸ್ಪಾನಿಷ್ ಅಹ್ಮದೀ ಮುಸ್ಲಿಂ ಅಬ್ದುರ್ರ ಹ್ಮಾನ್ ಅವರು ಕೃತಜ್ಞತೆ ಸಲ್ಲಿಸಿದರು.

ಹಜ್ರತ್ ಖಲೀಫರು ಪೆದ್ರೋಬಾದಿನ ಮೇಯರ ರಿಗೆ ಮಸೀದಿಯ ಚಿತ್ರವನ್ನು ಕೆತ್ತಿದ ತಾಮ್ರಪತ್ರವನ್ನು ಪಾರಿತೋಷಕವಾಗಿ ನೀಡಿದರು. ಕೊನೆಗೆ ಸ್ಪೈನ್ ಅಹ್ಮ ದಿಯಾ ಮುಸ್ಲಿಂ ಮಿಶನಿನ ವತಿಯಿಂದ ಅತಿಥಿಗಳಿಗೆ ಮಧುರ ಪಾನೀಯ ನೀಡಲಾಯಿತು.

## ರಬ್ವಾದಲ್ಲಿ 90ನೇ ವಾರ್ಷಿಕ ಮಹಾ ಸಮ್ಮೇಳನ – 2 ಲಕ್ಷ 20 ಸಾವಿರ ಪ್ರತಿನಿಧಿಗಳು

ಕಳೆದ ಡಿಸೆಂಬರ್ 26, 27 ಮತ್ತು 28ರಂದು ಪಾಕಿಸ್ತಾನದ ರಬ್ವಾದಲ್ಲಿ ಅಹ್ಮದಿಯಾ ಜಮಾಅತಿನ 90ನೇ ವಾರ್ಷಿಕ ಮಹಾ ಸಮ್ಮೇಳನ ಬಹಳ ವಿಜೃಂಭಣೆಯಿಂದ ಜರಗಿತು. ಅಹ್ಮದಿಯಾ ಚತುರ್ಥ ಖಲೀಫರಾದ ಹಜ್ರತ್ ತಾಹಿರ್ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾ ಟಿಸಿದರು.

ದೇಶ ವಿದೇಶಗಳಿಂದ 2 ಲಕ್ಷ 20 ಸಾವಿರದಷ್ಟು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

## ಸ್ಪೈನಿನಲ್ಲಿ ಅಹ್ಮದಿಯಾ ಮಸೀದಿ ಉದ್ಘಾಟಿಸಲ್ಪಟ್ಟಿತು

ಮ್ಯಾಡ್ರಿಡ್, ಸಪ್ಟೆಂಬರ್ 26 (ಪಿ. ಟಿ. ಐ.): 750 ವರ್ಷಗಳ ಬಳಿಕ, ಲೋಕ ವ್ಯಾಪಕ ಅಹ್ಮದಿಯಾ ಸಂಘಟನೆಯ ವತಿಯಿಂದ ನಿರ್ಮಿಸಲ್ಪಟ್ಟ ಬಿಶಾರತ್ ಮಸ್‌ಜಿದ್ (ಶುಭವಾರ್ತೆಯ ಮಸೀದಿ) ಇಲ್ಲಿಂದ 25 ಕಿಲೋ ಮೀಟರ್ ದೂರವಿರುವ ಪೆದ್ರೋಬಾದ್ ಎಂಬ ಶಾಂತ ವಾತಾವರಣವುಳ್ಳ ಪಟ್ಟಣದಲ್ಲಿ ಉದ್ಘಾಟಿ ಸಲ್ಪಟ್ಟಿತು.

6000 ಚದರ ಮೀಟರ್ ವಿಸ್ತೀರ್ಣ ಸ್ಥಳದಲ್ಲಿ 21 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾದ ಈ ಮಸೀ ದಿಯನ್ನು ಅಹ್ಮದಿಯಾ ಸಂಘಟನೆಯ ಸರ್ವೋನ್ನತ ನಾಯಕ, ಚತುರ್ಥ ಖಲೀಫರಾದ ಹಜ್ರತ್ ತಾಹಿರ್ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಭಾಗವಹಿಸಲು ಭಾರತದಿಂದ ಆಗಮಿಸಿದ 20 ಮಂದಿ ಸದಸ್ಯರ ಆಯೋಗದ ಮುಖಂಡ ರಾದ ಮಿರ್ಝಾ ವಸೀಂ ಅಹ್ಮದ್‌ರವರು, ಅಹ್ಮದಿಯಾ ಸಂಘಟನೆಯು 92 ವರ್ಷಗಳ ಮೊದಲು ಭಾರತದಲ್ಲಿ ಆರಂಭಿಸಿದ್ದಾಗಿ ಹೇಳಿ, ತನ್ನ ದೇಶವು ಈ ಸಂದರ್ಭದಲ್ಲಿ ಅತ್ಯಂತ ಸಂತೋಷ ಪಡುತ್ತದೆ ಎಂದರು.

ಆಫ್ರಿಕನರೂ ಏಷಿಯಾನರೂ, ಅಮೇರಿಕನರೂ, ಯುರೋಪಿಯನರೂ, ಅರಬರೂ ಮಂಗೋಲಿಯನರೂ ಆದ ಸುಮಾರು ಮೂರು ಸಾವಿರ ಅಹ್ಮದೀಯರು ಈ ಸಮಾರಂಭದಲ್ಲಿ ಪಾಲ್ಗೊಂಡರು (ದಿ ಟೈಮ್ಸ್ ಓಫ್ ಇಂಡಿಯಾ 27-9-'82).

## ಶ್ರೀಲಂಕಾದಲ್ಲಿ ಮಸೀದಿ

ಕಳೆದ ನವೆಂಬರ್ 12ರಂದು ಕೊಲಂಬೋದಿಂದ ಸುಮಾರು 32 ಮೈಲುಗಳಷ್ಟು ದೂರವಿರುವ ಪಸಿಯಾಲ ಎಂಬಲ್ಲಿ ಹೊಸ ಅಹ್ಮದಿಯಾ ಮಸೀದಿಯೊಂದು ಉದ್ಘಾ ಟಿಸಲ್ಪಟ್ಟಿದೆ. ಅಹ್ಮದಿಯಾ ಮಿಶನರಿ ಮೌಲವಿ ಮುಹ ಮ್ಮದ್ ಉಮರ್ ಸಾಹೇಬರು ಸಾಮೂಹಿಕ ಪ್ರಾರ್ಥನೆ ಯ ಬಳಿಕ ಮಸೀದಿಯ ಕವಾಟವನ್ನು ತೆರೆದು ಉದ್ಘಾಟನಾ ಕರ್ಮವನ್ನು ನೆರವೇರಿಸಿದರು. ಸಂಜೆ ಮಸೀದಿಯ ಹೊರ ಗಡೆ ಸಾರ್ವಜನಿಕ ಸಭೆ ಜರಗಿತು.

## ಇಂಡೋನೇಷ್ಯಾದಲ್ಲಿ ಹೊಸ ಘಟಕ

ಜಕಾರ್ತದ ಸಮೀಪದ ಪ್ರದೇಶವೊಂದರಲ್ಲಿ ಇತ್ತೀ ಚೆಗೆ 45 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿರುವ ರೆಂದೂ ಹೊಸ ಒಂದು ಅಹ್ಮದಿಯಾ ಘಟಕ ಸ್ಥಾಪಿಸಲ್ಪ ಟ್ಟಿದೆಯೆಂದೂ ಅಹ್ಮದಿಯಾ ಮಿಶನರಿ ಝಫರುಲ್ಲಾ ಅಹ್ಮದ್ ತಿಳಿಸಿರುವರು.

ಇಂಡೋನೇಷ್ಯಾದಲ್ಲಿ ಎಂಟು ಮಂದಿ ಅಹ್ಮದಿಯಾ ಮಿಶನರಿಗಳು ಪ್ರವರ್ತಿಸುತ್ತಿದ್ದಾರೆ.

## ಗಾಂಬಿಯಾದಲ್ಲಿ ಮಸೀದಿಗೆ ಸರಕಾರದಿಂದ ನಿವೇಶನ

ಗಾಂಬಿಯಾ (ಪ. ಆಫ್ರಿಕ) ದ ರಾಜಧಾನಿಯಲ್ಲಿ ಅಹ್ಮದಿಯಾ ಮಸೀದಿಗಾಗಿ 4 ಕನಾಲ್ (20,000 ಚ. ಅಡಿ) ವಿಸ್ತೀರ್ಣವುಳ್ಳ ಸ್ಥಳವೊಂದನ್ನು ಸರಕಾರ ನೀಡಿದೆ ಯೆಂದು ಗಾಂಬಿಯಾ ಅಹ್ಮದಿಯಾ ಮಿಶನರಿ ಮೌಲಾನ ಫಝಲ್ ಇಲಾಹಿ ಸಾಹೇಬರು ತಿಳಿಸಿದ್ದಾರೆ.

## ಸಿರಾಲಿಯೋನ್‌ನಲ್ಲಿ ಮಸೀದಿ

ಕಳೆದ ಅಕ್ಟೋಬರ್ 29ರಂದು ಸಿರಾಲಿಯೋನ್ (ಪ. ಆಫ್ರಿಕ)ನ ಬೋ ಎಂಬ ಪಟ್ಟಣದಲ್ಲಿ "ನಾಸಿರ್ ಮಸ್‌ಜಿದ್" ಎಂಬ ಹೆಸರಿನ ಅಹ್ಮದಿಯಾ ಮಸೀದಿ ಯೊಂದು ಉದ್ಘಾಟಿತವಾಯಿತೆಂದು ಅಹ್ಮದಿಯಾ ಮಿಶನರಿ ಮೌಲವಿ ಖಲೀಲ್ ಅಹ್ಮದ್ ಸಾಹೇಬರು ತಿಳಿಸಿದ್ದಾರೆ.

## ಕೆನ್ಯಾದಲ್ಲಿ 8ನೇ ವಾರ್ಷಿಕ ಸಮ್ಮೇಳನ

ಜಮಾಅತ್ ಅಹ್ಮದಿಯಾ ಕೆನ್ಯಾ (ಪ. ಆಫ್ರಿಕ)ದ ಎಂಟನೆ ವಾರ್ಷಿಕ ಸಮ್ಮೇಳನವು ಕಳೆದ ಸೆಪ್ಟೆಂಬರ್ 8, 9 ಮತ್ತು 10ರಂದು ಯಶಸ್ವಿಯಾಗಿ ಜರಗಿತೆಂದು ಅಹ್ಮ ದಿಯಾ ಮಿಶನರಿ ಹಾಫಿಝ್ ಮುಹಮ್ಮದ್ ಸಿದ್ದೀಕ್ ಸಾಹೇಬ್ ತಿಳಿಸಿದ್ದಾರೆ.

## ಕೆನಡಾದಲ್ಲಿ 5ನೇ ವಾರ್ಷಿಕ ಸಮ್ಮೇಳನ

ಕಳೆದ ಜುಲೈ 31 ಮತ್ತು ಆಗೋಸ್ತು 1ರಂದು ಕೆನಡಾದ ಅಹ್ಮದಿಯಾ ಜಮಾಅತಿನ 5ನೇ ವಾರ್ಷಿಕ ಸಮ್ಮೇಳನ ಟೊರೊಂಟೋದಲ್ಲಿ ಸಮಾವೇಶಗೊಂಡಿತು

ಮುಖ್ಯ ಅತಿಥಿಗಳಾಗಿ ಅಮೇರಿಕದ ಅಹ್ಮದಿಯಾ ಮಿಶನರಿ ಮೌಲಾನ ಅತಾವುಲ್ಲಾ ಕಲೀಂ ಮತ್ತು ಚಿಕಾಗೋದ ಮಿಶನರಿ ಮಿರ್ಝಾ ಮುಹಮ್ಮದ್ ಅಫ್‌ಝಲ್ ಅವರು ಸಮ್ಮೇಳನದಲ್ಲಿ ಭಾಗವಹಿಸಿದರು.

## ಖಾದಿಯಾನಿನಲ್ಲಿ 91ನೇ ವಾರ್ಷಿಕ ಮಹಾ ಸಮ್ಮೇಳನ

ಭಾರತದ ಅಹ್ಮದಿಯಾ ಕೇಂದ್ರವಾದ ಖಾದಿಯಾನಿ ನಲ್ಲಿ ಕಳೆದ ಡಿಸೆಂಬರ್ 18, 19 ಮತ್ತು 20ರಂದು 91ನೇ ವಾರ್ಷಿಕ ಮಹಾ ಸಮ್ಮೇಳನವು ಬಹಳ ವಿಜೃಂಭಣೆ ಯಿಂದ ಜರಗಿತು.

ದೇಶದ ನಾನಾ ಕಡೆಗಳಿಂದಲೂ ಅಮೇರಿಕಾ, ಪಶ್ಚಿಮ ಜರ್ಮನಿ, ಫಿಜಿ, ಇಂಗ್ಲೆಂಡ್. ಜೋರ್ಡಾನ್, ಇಸ್ರೇಲ್, ಈಜಿಪ್ಟ್, ಮೊರಿಷ್ಯಸ್, ನೈಜೀರಿಯಾ, ಸಿಂಗಾಪುರ, ಶ್ರೀಲಂಕಾ, ಕೆನಡಾ, ಯುಗಾಂಡ, ಬಂಗ್ಲಾದೇಶ, ಪಾಕಿಸ್ತಾನ, ಕೆನ್ಯಾ, ಆಸ್ಟ್ರೇಲಿಯಾ, ಗಿಯಾನಾ, ಇಂಡೋನೇಷ್ಯಾ ಇತ್ಯಾದಿ ಹೊರ ದೇಶಗಳಿಂದಲೂ ಸಾವಿರಾರು ಅಹ್ಮದೀ ಸ್ತ್ರೀ, ಪುರುಷರು ಸಮ್ಮೇಳನದಲ್ಲಿ ಪಾಲ್ಗೊಂಡರು.

ದೈವಾಸ್ತಿಕ್ಯ, ವಿಶ್ವ ಸಾಹೋದರ್ಯ, ಲೋಕ ಶಾಂತಿ, ಧರ್ಮ ಸಾಮರಸ್ಯ, ಅಹ್ಮದಿಯಾ ವಿಶ್ವಾಸಾ ದರ್ಶಗಳು ಇತ್ಯಾದಿ ವಿಷಯಗಳ ಕುರಿತು ಅಹ್ಮದಿಯಾ ವಿದ್ವಾಂಸರು ಭಾಷಣ ಮಾಡಿದರು.

## ಮಂಜೇರಿಯಲ್ಲಿ 25ನೇ ವಾರ್ಷಿಕ ಸಮ್ಮೇಳನ

ಜನವರಿ 8 ಮತ್ತು 9ರಂದು ಕೇರಳ ರಾಜ್ಯ ಅಹ್ಮದಿಯಾ 25ನೇ ವಾರ್ಷಿಕ ಸಮ್ಮೇಳನವು ಮಂಜೇರಿ ಯಲ್ಲಿ ಸಜ್ಜೀಕರಿಸಲಾದ "ಇಮಾಂ ಮಹ್‌ದಿ ನಗರ"ದಲ್ಲಿ ಯಶಸ್ವಿಯಾಗಿ ಜರಗಿತು.

ಮೌಲಾನಾ ಷರೀಫ್ ಅಹ್ಮದ್ ಸಾಹೇಬ್ ಅಮೀನಿ (ನಾಝಿರ್ ಉಮೂರೆ ಆಮ, ಖಾದಿಯಾನ್) ಅವರು ಸಮ್ಮೇಳನವನ್ನು 8ರಂದು ಸಾಯಂಕಾಲ ಉದ್ಘಾಟಿಸಿ ದರು. ಕೇರಳದ ಮುಖ್ಯ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು ಅಧ್ಯಕ್ಷತೆ ವಹಿಸಿದರು. ಉಸ್ಮಾನಿಯಾ ಯುನಿವರ್ಸಿಟಿಯ ಖಗೋಳ ಶಾಸ್ತ್ರ ವಿಭಾಗದ ಹಾಫಿಝ್ ಡಾ। ಸಾಲಿಹ್ ಮುಹಮ್ಮದ್ ಅಲಾವುದ್ದೀನ್ ಸಾಹೇಬ್, ತಮಿಳ್ನಾಡಿನ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬ್, ಸಿದ್ದೀಖ್ ಅಮೀರಲಿ ಸಾಹೇಬ್. ಎನ್. ಅಬ್ದುರ್ರಹೀಂ ಸಾಹೇಬ್, ಮಹ್ಮೂದ್ ಅಹ್ಮದ್ ಸಾಹೇಬ್, ಎಡ್ವಕೇಟ್ ಶಹೀದ್ ಅಹ್ಮದ್ ಸಾಹೇಬ್, ಇ. ತಾಹಿರ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು. ಸ್ಟೇಟ್ ಕಮಿಟಿ ಅಧ್ಯಕ್ಷ ಡಾ। ಮನ್‌ಸೂರ್ ಅಹ್ಮದ್ ಸಾಹೇಬ್ ಸ್ವಾಗತಿಸಿದರು; ಕಾರ್ಯದರ್ಶಿ ಇ. ತಾಹಿರ್ ಸಾಹೇಬ್ ಕೊನೆಗೆ ಕೃತಜ್ಞತೆ ಸಲ್ಲಿಸಿದರು.

8ರಂದು ಬೆಳಗಾತ, ಸ್ಪೈನಿನ ಬಿಶಾರತ್ ಮಸೀದಿಯ ಉದ್ಘಾಟನಾ ಕಾರ್ಯಕ್ರಮದ ವೀಡಿಯೋವನ್ನು ಪ್ರದರ್ಶಿಸಲಾಯಿತು. 9ರಂದು ಪೂರ್ವಾಹ್ನ ರಾಜ್ಯ ಸಮಿತಿ ಪ್ರತಿನಿಧಿಗಳ ಸಭೆ ಮತ್ತು ಶಿಕ್ಷಣ-ಬೋಧನ ಸಭೆ ಜರಗಿದುವು.

## ಪಾಲ್ಘಾಟ್‌ನಲ್ಲಿ ಮಸೀದಿ

ಕಳೆದ ನವೆಂಬರ್ 19ರಂದು (ಶುಕ್ರವಾರ) ಕೇರಳದ ಪಾಲ್ಘಾಟಿನಲ್ಲಿ ಅಹ್ಮದಿಯಾ ಮಸೀದಿಯೊಂದು ಉದ್ಘಾಟಿತವಾಯಿತು. ಮಲಿಕ್ ಸಲಾಹುದ್ದೀನ್ ಸಾಹೇಬರು ಮಸೀದಿಯನ್ನು ಉದ್ಘಾಟನೆ ಮಾಡಿದರು.

## ಕೊಡಿಯತ್ತೂರಿನಲ್ಲಿ ಅಧ್ಯಯನ ಶಿಬಿರ

ಕಳೆದ ನವೆಂಬರ್ 20 ಮತ್ತು 21ರಂದು ಕಲ್ಲಿಕೋಟೆಗೆ ಸಮೀಪದ ಕೊಡಿಯತ್ತೂರ್ ಎಂಬಲ್ಲಿ ಅಹ್ಮದಿಯಾ ಬಾಲಕರಿಗೂ ಯುವಜನರಿಗೂ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಯಿತು. ಕೇಂದ್ರ ವಕ್ಫ್ ಜದೀದ್ ವಿಭಾಗದ ಮಲಿಕ್ ಸಲಾಹುದ್ದೀನ್ ಸಾಹೇಬರು ಶಿಬಿರದ ಮೇಲ್ನೋಟವನ್ನು ವಹಿಸಿದರು. ಮೌಲವಿ ಯು. ಅಬೂಬಕ್ಕರ್ ಸಾಹೇಬ್ ಶಿಬಿರದ ವ್ಯವಸ್ಥಾಪಕರಾಗಿದ್ದರು.

## ಮದ್ರಾಸಿನಲ್ಲಿ ಟೆಲಿವಿಷನ್ ಮತ್ತು ರೇಡಿಯೋ ಭಾಷಣ

ಕಳೆದ ಸಪ್ಟೆಂಬರ್ 28ರಂದು ತಮಿಳ್ನಾಡಿನ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬರು ಈದುಲ್ ಅಝ್‌ಹಾದ ಕುರಿತು, ಅದು ಜಗತ್ತಿಗೆ ನೀಡಿದ ಅತಿ ಮಹತ್ವದ ಅಧ್ಯಾಪನದ ಬಗ್ಗೆ ಮದ್ರಾಸಿನ ಟಿ. ವಿ. ನಿಲಯದಲ್ಲಿ ಭಾಷಣ ಮಾಡಿದರು.

ಅದೇ ದಿನ ಮದ್ರಾಸ್ ಅಹ್ಮದಿಯಾ ಜಮಾಅತಿನ ಅಧ್ಯಕ್ಷ ಮೊಹಿಯುದ್ದೀನ್ ಅಲಿ ಅವರ ಭಾಷಣವನ್ನು ಆಲ್ ಇಂಡಿಯಾ ರೇಡಿಯೋ ಮದ್ರಾಸ್ ನಿಲಯ ಬಿತ್ತರಿಸಿತು.

## 'ದಅ್‌ವಶ್ ನಗರ'ದ ಸಮೀಪ ಅಹ್ಮದಿಯಾ ಬುಕ್‌ಸ್ಟಾಲ್

ಮಲಪ್ಪುರಂ: ಫೆಬ್ರವರಿ 19 ಮತ್ತು 20ರಂದು ಮಲಪ್ಪುರಂ ಸಮೀಪದಲ್ಲಿ ಜರಗಿದ ಜಮಾಅತೆ ಇಸ್ಲಾಮಿ ಸಮ್ಮೇಳನ ಸ್ಥಳದ ಹತ್ತಿರ ಅಹ್ಮದಿಯಾ ಬುಕ್‌ಸ್ಟಾಲೊಂದನ್ನು ತೆರೆಯಲಾಗಿತ್ತು.

ಬುಕ್‌ಸ್ಟಾಲಿಗೆ ಸ್ಥಳ ನೀಡಲು ಒಪ್ಪಿದ ಹಿಂದೂ ಮಹನೀಯರೊಬ್ಬರನ್ನು ಮೌದೂದಿಗಳು ಸಮೀಪಿಸಿ, ಸ್ಥಳ ನೀಡದಂತೆ ತಡೆಯಲು ಪ್ರಯತ್ನಿಸಿದಾಗ, ನೀವೆಷ್ಟು ಒತ್ತಾಯ ಪಡಿಸಿದರೂ ನಾನು ಕೊಟ್ಟ ಮಾತಿಗೆ ತಪ್ಪಲಾರೆನೆಂದು ಆ ಮಹನೀಯರು ಹೇಳಿ ಅವರನ್ನು ನಿರಾಶೆಗೊಳಿಸಿದರು. ದೈವಾನುಗ್ರಹದಿಂದ ನಮ್ಮ ಬುಕ್‌ಸ್ಟಾಲ್ ಅಲ್ಲೊಂದು ಚರ್ಚಾ ವಿಷಯವಾಗಿತ್ತು.

—o—o—

---

ನಿಧನ ವಾರ್ತೆ

# ಜನಾಬ್ ಯು. ಇಬ್ರಾಹಿಂ ಕುಞ್ಞಿ ಸಾಹೇಬ್

ಮೂಲತಃ ಕೊಡಾಳಿ ನಿವಾಸಿಯಾಗಿದ್ದ, ಕಲ್ಲಿಕೋಟೆ ಅಹ್ಮದಿಯಾ ಜಮಾಅತಿನ ಪ್ರಮುಖ ಸದಸ್ಯರಲ್ಲೊಬ್ಬರೂ ಯುಗರಶ್ಮಿ ಸಂಪಾದಕರ ಸೋದರಿಯ ಪತಿಯೂ ಆದ ಜ। ಯು. ಇಬ್ರಾಹಿಂ ಕುಞ್ಞಿ ಸಾಹೇಬರು ತನ್ನ 47ನೇ ವಯಸ್ಸಿನಲ್ಲಿ ಕಳೆದ ನವೆಂಬರ್ 18ರಂದು ಕಲ್ಲಿಕೋಟೆಯಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

M. R. F. ಟಯರ್ ಕಂಪೆನಿಯಲ್ಲಿ ಉದ್ಯೋಗಸ್ಥರಾಗಿದ್ದ ಅವರು ದೀರ್ಘಕಾಲ ಮುಂಬಾಯಿಯಲ್ಲಿ ವಾಸಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಅನೇಕ ವರ್ಷ ಕಾಲ ಬೊಂಬಾಯಿ ಜಮಾಅತಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಜಮಾಅತಿನ ಚಟುವಟಿಕೆಗಳಲ್ಲೆಲ್ಲಾ ಅತ್ಯಾಸಕ್ತಿಯನ್ನೂ ಆತ್ಮಾರ್ಥತೆಯನ್ನೂ ತ್ಯಾಗಶೀಲತೆಯನ್ನೂ ಅವರು ತೋರ್ಪಡಿಸುತ್ತಿದ್ದರು. ಅವರು "ಯುಗರಶ್ಮಿ"ಯ ಹಿತೈಷಿಗಳಲ್ಲೊಬ್ಬರು. ಅವರು ಸ್ನೇಹಶೀಲರೂ ಪರೋಪಕಾರಿಯೂ ಆಗಿದ್ದರು. ಅವರು ಪತ್ನಿಯನ್ನೂ ಮೂವರು ಪುತ್ರಿಯರನ್ನೂ 10 ವಯಸ್ಸಿನ ಪುತ್ರನೊಬ್ಬನನ್ನೂ ಅಸಂಖ್ಯಾತ ಬಂಧುಮಿತ್ರಾದಿಗಳನ್ನೂ ಅಗಲಿ ಹೋಗಿರುವರು. ಮೃತರಿಗೆ ಅಲ್ಲಾಹು ಮಗ್‌ಫಿರತನ್ನೂ ಜನ್ನತನ್ನೂ ನೀಡಲಿ; ಅವರ ಕುಟುಂಬವನ್ನು ರಕ್ಷಿಸಲಿ; ಸಂತಪ್ತರಿಗೆ ಸಮಾಧಾನವನ್ನು ಕರುಣಿಸಲಿ. ಆಮೀನ್.

---



ಇತ್ತೀಚೆ ಅಲೆಪ್ಪಿಯಲ್ಲಿ ಉದ್ಘಾಟಿಸಲ್ಪಟ್ಟ ಅಹ್ಮದಿಯಾ ಮಸೀದಿ


# AHMADIYYA URDU LITERATURE

1. Akaide Ahmadiyyath
2. Khathamunnabiyyeen
3. Zuroorathe Mazhab
4. Wafathe Masih Par Ulamaye Misr Ka Fatwe
5. Hazrath Masih Mashrik Mein


**WILL BE SENT FREE**

Apply with 25 Paise Stamp for each book to :

Book Secretary, Ahmadiyya Muslim Mission,
10-23/1008, Ansari Road, Mangalore-575 001.

Regd. with the Registrar of Newspapers for India. Regd No. R. N. 27354/75
**YUGARASHMI Kannada Quarterly, March 1983 / Aman 1362**

# English Translation of the HOLY QURAN with ARABIC TEXT & EXTENSIVE INDEX




**Price:**

**Rs. 15-00**

**Postal Charge Extra**

---

**AHMADIYYA ENGLISH LITERATURE**

| | | |
|---|---|---|
| 1. | INTRODUCTION TO THE STUDY OF HOLY QURA'N<br>by Hazrath Mirza Bashiruddin Muhmud Ahmad | 16-00 |
| 2. | THE TEACHINGS OF ISLAM<br>by Hazrath Mirza Ghulam Ahmad | 6 00 |
| 3. | JESUS IN INDIA<br>by Hazrath Mirza Ghulam Ahmad | 2-25 |
| 4. | WHERE DID JESUS DIE?<br>by J. D. Shams, Ex Imam, London Mosque | 2-25 |
| 5. | THE TOMB OF JESUS<br>by Soofi Mutiurrhman Bengali, M A. | 1-00 |

**Write to: NAZIR DAWAT-O-TABLIGH, Qadian [Punjab]-143 516**

Edited and Published by Muhammad Yusuf on behalf of Jamath Ahmadiyya
at 10-23/1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.